ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

ಜನವರಿ 2023 ಸಂಪುಟ 19
ಸಂಚಿಕೆ 01
ಸಂಚಿಕೆ ಬೆಲೆ ರೂ. 1/-

# ಸ್ನೇಹ ಚಿಂತನೆ

ಮಾಸ ಪತ್ರಿಕೆ




ಯಕ್ಷಗಾನ ಸಮಿತಿಯ ವತಿಯಿಂದ – ಯಕ್ಷತರಂಗ ಯಕ್ಷಗಾನ





ಕ್ರೀಡಾ ವಿಭಾಗದ ವತಿಯಿಂದ ವಾಲಿಬಾಲ್ ಪಂದ್ಯಾಟ




ಯುವ ವಿಭಾಗದ ವತಿಯಿಂದ ಹೊಸವರ್ಷಾಚರಣೆ

324, Chord Road, Vijayanagara
Bengaluru - 560 040.
Ph: 080 2339 9323/ 2339 9635
E: info@buntsanghablr.com

CREDAI
BENGALURU

ANIKA redwood homes




## Ready to Move in 2/3 BHK Apartments for the discerning few



AVAIL ATTRACTIVE NEW YEAR OFFERS



*We put up the walls and beams*
*You build it with love and dreams*

Anika Redwood Homes,
Coconut Garden, Nagarabhavi Main Road,
Bengaluru,
Karnataka - 560072

PRM/KA/RERA/1251/310/PR/190108/002281
PRM/KA/RERA/1251/309/PR/180406/001483

ANIKA DEVELOPERS

CONTACT US
+91 9901991111
+91 9845076189
+91 7406633111

https://www.anikadevelopers.com
info@anikadevelopers.com

Anika Developers, # 4912, 10th Floor, High point IV #45, Palace Road, Bengaluru 560001

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL 19** **JANUARY 2023** **ISSUE 01**

**ಸಾಹಿತ್ಯ ಮತ್ತು ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
ಶ್ರೀ ಅರವಿಂದ ಶೆಟ್ಟಿ ಎಂ.

**ಸಲಹಾ ಮಂಡಳಿ :**
ಶ್ರೀ ಸತ್ಯಾನಂದ ಮೇಲಾಂಟ ಎನ್.

**ಸಂಪಾದಕ ಮಂಡಳಿ :**
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀಮತಿ ಜಯಲಕ್ಷ್ಮೀ ಸಿ. ಶೆಟ್ಟಿ
ಶ್ರೀಮತಿ ಶ್ಯಾಮಲ ಶೆಟ್ಟಿ
ಶ್ರೀಮತಿ ನಿರ್ಮಲಾ ಸಿ. ರೈ
ಡಾ॥ ಶಾಲ್ಮಲೀ ಸುರೇಶ್
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ
ಶ್ರೀಮತಿ ಆರತಿ ಸುರೇಶ್ ಶೆಟ್ಟಿ
ಶ್ರೀಮತಿ ಅನುಷಾ ಶೆಟ್ಟಿ
ಶ್ರೀ ಪ್ರದೀಪ್ ಕುಮಾರ್ ಹೆಗ್ಡೆ
ಶ್ರೀ ಜಯರಾಮ ಶೆಟ್ಟಿ, ನೂಜಾಡಿ
ಶ್ರೀ ಪ್ರಕಾಶ್ ರೈ
ಶ್ರೀ ಪ್ರದೀಪ್‌ರಾಜ್ ಶೆಟ್ಟಿ

**ಪೋಷಕ ಸದಸ್ಯರು :**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ.ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು :**
ಶ್ರೀ ಆನಂದರಾಮ ಶೆಟ್ಟಿ ಬಿ.

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ. **– ಸಂಪಾದಕ ಮಂಡಳಿ**

## ಒಳ ಪುಟಗಳಲ್ಲಿ.....

| | **ಪುಟ** |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಗಳ ವರದಿ | 4 |
| Sandwich Generation | 8 |
| ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ ಯಕ್ಷತ'ರಂಗ' – ವರದಿ | 10 |
| ಸೇವಾಚೇತನ – ವರದಿ | 15 |
| ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ವಾರ್ಷಿಕೋತ್ಸವ – ಕರೆಯೋಲೆ | 19 |
| ಯುವ ವಿಭಾಗ – ಹೊಸ ವರ್ಷ ಆಚರಣೆ | 20 |

**ಮುಖ ಪುಟ**

ಯಕ್ಷಗಾನ ಸಮಿತಿಯಿಂದ ಯಕ್ಷತ'ರಂಗ'
ಕ್ರೀಡಾ ವಿಭಾಗದಿಂದ ವಾಲಿಬಾಲ್ ಪಂದ್ಯಾಟ
ಯುವ ವಿಭಾಗದ ವತಿಯಿಂದ ಹೊಸ ವರ್ಷಾಚರಣೆ

# ಸಂಪಾದಕೀಯ



ಹೊಸ ಹುರುಪು, ಹೊಸ ಕನಸು, ಹೊಸ ನಿರೀಕ್ಷೆ, ಹೊಸ ಲಕ್ಷ್ಯ ಹೀಗೆ ಹಲವು ಹೊಸತುಗಳನ್ನು ಹೊತ್ತು ತರುವ ಹೊಸ ವರ್ಷ ಮತ್ತೆ ಬಂದಿದೆ. ನಮ್ಮ ಸಂಸ್ಕೃತಿಯಲ್ಲಿ ಹೊಸ ವರ್ಷಾರಂಭವಾಗುವುದು 'ಯುಗಾದಿ'ಯಿಂದ. ಈ ದಿನವನ್ನು ನಾವೆಲ್ಲರೂ ಸಾಂಪ್ರದಾಯಿಕವಾಗಿ ಆಚರಿಸುತ್ತೇವೆ. ಈ ಕ್ಯಾಲೆಂಡರ್ ಹೊಸವರ್ಷ ಪಾಶ್ಚಿಮಾತ್ಯರ ಆಚರಣೆಯಾದರೂ ಸಹ ಇಡೀ ವಿಶ್ವದ ಜನರೊಂದಿಗೆ ಈ ಸಂಭ್ರಮದಲ್ಲಿ ನಾವು ಪಾಲ್ಗೊಂಡು ಹೊಸ ವರ್ಷವನ್ನು ಸ್ವಾಗತಿಸುತ್ತೇವೆ.

'ಹೊಸವರ್ಷ'ವೆಂದರೆ ಅದೇನೋ ಉತ್ಸಾಹ, ಸಡಗರ, ಹೊಸತನದ ಅನುಭವ, ನಿರೀಕ್ಷೆ, ಜೀವನದ ಕಹಿ ಮರೆತು ಸಿಹಿ ತುಂಬುವ ಕಾತುರ. ತಮ್ಮೆಲ್ಲಾ ಆಸೆ ಆಕಾಂಕ್ಷೆಗಳು, ಕನಸುಗಳ ಸಾಕಾರತೆಗೆ ಇನ್ನಷ್ಟು ಇಂಬು ನೀಡುವ ಭರವಸೆ, ಧೈರ್ಯಗಳನ್ನು ಹೊತ್ತು ತರಬಹುದೆನ್ನುವ ಹಂಬಲ. ಹೀಗೆ ಹತ್ತು ಹಲವು ಆಶಯ, ನಿರೀಕ್ಷೆಗಳೊಂದಿಗೆ ನೂತನ ವರ್ಷವನ್ನು ಬರಮಾಡಿಕೊಂಡಿದ್ದೇವೆ. ಗೋಡೆಯ ಮೇಲೆ ತೂಗು ಹಾಕಿದ ಕ್ಯಾಲೆಂಡರ್ ಬದಲಾಗಿದೆ. ಹೊಸ ವರ್ಷದ ಖುಷಿಯ ಹೊನಲಿನಲ್ಲಿ ನಾವಿದ್ದೇವೆ. ಜೀವನದ ಈ ಪ್ರಯಾಣದಲ್ಲಿ ಸಮಯದ ಕುದುರೆಯ ಹಿಂದೆ ಓಡುತ್ತಿರುವ ನಾವು ಕಳೆದು ಹೋದಂತಹ ವರ್ಷವನ್ನೊಮ್ಮೆ ಮೆಲುಕು ಹಾಕಿದರೆ, ಸಿಹಿ–ಕಹಿ ನೆನಪುಗಳ ತೆರೆದ ಪುಟಗಳು ಮನಸ್ಸಿನಲ್ಲಿ ಹಾದು ಹೋಗುತ್ತವೆ. ಈ ಹಿಂದೆ ಇದೇ ಹುರುಪಿನಿಂದ ಸ್ವಾಗತಿಸಿದ್ದ ವರ್ಷ ಕೆಲವರಿಗೆ ಕೇವಲವಾಗಿ ಭಾಸವಾದರೆ, ಇನ್ನೂ ಹಲವರಿಗೆ ಅಂದುಕೊಂಡ ಗುರಿ ಸಾಧಿಸಿದ ಸಮಾಧಾನವಿರುತ್ತದೆ. ಹೊಸವರುಷವೆಂದರೆ ಹೀಗೆಯೇ, ಸ್ವಾಗತಿಸುವಾಗ ಏನೋ ಸಂತಸ, ಸಡಗರ, ಹುಮ್ಮಸ್ಸು, ಜೀವಿಸುವಾಗ ಇನ್ನೊಂದು ವರ್ಷವಷ್ಟೇ ಪ್ರಾರಂಭದಲ್ಲಿ ಸಂಕಲ್ಪ ಮಾಡಿದ ಗುರಿ, ಕಂಡ ಕನಸುಗಳನ್ನೆಲ್ಲಾ ಮೂಟೆಕಟ್ಟಿಟ್ಟು ಮತ್ತೆ ಅದೇ ಸಮಯದ ಕೈಗೊಂಬೆಗಳಂತೆ ಓಡುತ್ತಿರುತ್ತೇವೆ. ಮತ್ತೆ ಇವೆಲ್ಲಾ ನೆನಪಾಗುವುದು ಮತ್ತೊಂದು ಹೊಸ ವರ್ಷ ಕಾಲಿರಿಸಿದಾಗ. ಏನನ್ನೂ ಸಾಧಿಸಲಾಗಲಿಲ್ಲವೆಂಬ ನಿರಾಶೆಯೊಂದಿಗೆ ಈ ಶೂನ್ಯ ಭಾವದಿಂದ ಕುಸಿಯುವುದರ ಬದಲಾಗಿ ಯಾವ ಮಹತ್ತರ ಸಾಧನೆ ಅಲ್ಲದಿದ್ದರೂ ಹಿತಚಿಂತನೆಗಳು, ಸತ್ಕಾರ್ಯಗಳು, ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡರೆ ವರ್ಷದ ಕೊನೆಯಲ್ಲಿ ಸಂತೃಪ್ತಿಯ ಕ್ಷಣ ನಮ್ಮದಾಗುತ್ತದೆ. ಹೊಸ ವರ್ಷವನ್ನು ಕೇವಲ ಹೊಸ ಕ್ಯಾಲೆಂಡರ್ ಮೂಲಕ ನೋಡದೇ ಹಳೆಯ ಸಂತೋಷದ ಕ್ಷಣಗಳನ್ನು ಮೆಲುಕು ಹಾಕುತ್ತಾ, ತಪ್ಪುಗಳನ್ನು ತಿದ್ದಿಕೊಂಡು ಸನ್ಮಾರ್ಗದಲ್ಲಿ ಮುನ್ನಡೆಯುವ ಸಂಕಲ್ಪ ಮಾಡೋಣ.

ಈ ಜೀವನದ ಪಯಣದಲ್ಲಿ ಹೆಜ್ಜೆ ಹೆಜ್ಜೆಗೂ ಅನೇಕ ವಿಚಿತ್ರ, ವಿಭಿನ್ನ ವ್ಯಕ್ತಿಗಳು ಬಂದು ಹೋಗುತ್ತಾರೆ. ಕೆಲವರು ನಮ್ಮ ಒಳಿತನ್ನು ಬಯಸುವ ಹಿತೈಷಿಗಳಾದರೆ, ಕೆಲವರು ಕೆಡುಕನ್ನು ಬಯಸುವ ಹಿತಶತ್ರುಗಳು, ಇನ್ನೂ ಕೆಲವರು ಜೀವನದ ಪಾಠವನ್ನು ಕಲಿಸಿ ಹೋಗುವ ನಯವಂಚಕರಾದರೆ ಇನ್ನೂ ಹಲವರು ಸದಾ ಜೊತೆಗಿದ್ದು ಬೆಂಬಲಿಸಿ ಆಶೀರ್ವದಿಸುವ ಬಾಂಧವರು. ಹೀಗೆ ಎಲ್ಲರನ್ನೂ, ಎಲ್ಲವನ್ನೂ ಸಮಾಧಾನದಿಂದ, ಸಮಾನಚಿತ್ತರಾಗಿ ಸ್ವೀಕರಿಸೋಣ. ಜೀವನದಲ್ಲಿ ಸಂಭವಿಸುವ ಪ್ರತಿಯೊಂದು ಸಂದರ್ಭ, ವ್ಯಕ್ತಿ, ಪಾತ್ರವೂ ಒಂದಲ್ಲ ಒಂದು ಜೀವನ ಪಾಠದ ಅನುಭವ ನೀಡುತ್ತವೆ. ನಮ್ಮ ಹಿತೈಷಿಗಳಿಗೆ ಕೃತಜ್ಞತೆ ಸಲ್ಲಿಸುತ್ತಾ, ಕಹಿ ಬಯಸುವವರಿಗೆ ಹಿತ ಬಯಸುತ್ತಾ, ನಿನ್ನೆಯ ಕಹಿ ಮರೆತು, ನಾಳೆಯ ಹೊಂಗನಸುಗಳನ್ನು ಹೊಸೆದು, ದೃಢವಾದ ಗುರಿ ಸಾಧನೆಯನ್ನು ಸಾಕಾರಗೊಳಿಸುವ ಮೂಲಕ ಸಾರ್ಥಕ ಜೀವನ ನಮ್ಮದಾಗಿಸೋಣ. ಈ ವರ್ಷವನ್ನು ಕೇವಲ ಇನ್ನೊಂದು ಸಾಧಾರಣ ವರ್ಷವಾಗಿಸದೇ ಅರ್ಥಪೂರ್ಣವಾಗಿಸೋಣ.

ಈ ನೂತನ ವರ್ಷವು ಎಲ್ಲರಿಗೂ ಶುಭವನ್ನು ತರಲಿ. ಸಂಘದ ಸರ್ವ ಸದಸ್ಯರಿಗೂ ಮಕರ ಸಂಕ್ರಾಂತಿಯ ಪ್ರೀತಿ ಪೂರ್ವಕವಾದ ಶುಭಾಶಯಗಳು.

**ಅರವಿಂದ ಶೆಟ್ಟಿ ಎಂ.**

# ಅಧ್ಯಕ್ಷರ ಮಾತು



2022ರ ವರ್ಷ ಕಳೆದು 2023ಕ್ಕೆ ನಾವು ಕಾಲಿಟ್ಟಿದ್ದೇವೆ. ಅನೇಕ ಏರಿಳಿತಗಳನ್ನು ಅನುಭವಿಸಿ, ಹೊಸತನವನ್ನು ಮೈಗೂಡಿಸಿಕೊಂಡು, ಹೊಸ ಮಿತ್ರರನ್ನು ಗಳಿಸಿ, ನಮ್ಮ ಕೆಲಸ, ವ್ಯವಹಾರ, ಉದ್ಯಮಗಳನ್ನು ನಡೆಸಿಕೊಂಡು 2022ರ ವರ್ಷವನ್ನು ಸಂತೋಷದಿಂದ ಕಳೆದಿದ್ದೇವೆ.

ಹೆಲೆನ್ ಕೆಲರ್‌ರವರ ಮಾತಿನಂತೆ ಸಂತೋಷದ ಒಂದು ಬಾಗಿಲು ಮುಚ್ಚಿದಾಗ ಮತ್ತೊಂದು ಬಾಗಿಲು ತೆರೆಯುತ್ತದೆ. ಆದರೆ ನಾವು ಎಲ್ಲಿಯವರೆಗೆ ಮುಚ್ಚಿದ ಬಾಗಿಲಿನ ಕಡೆಗೆ ನೋಡುತ್ತಿರುತ್ತೇವೆಯೋ ಅಲ್ಲಿತನಕ ನಮಗೆ ನಮಗಾಗಿ ತೆರೆದ ಇನ್ನೊಂದು ಬಾಗಿಲು ಕಾಣುವುದಿಲ್ಲ. ಅದರಂತೆ ನಾವೆಲ್ಲರೂ 2023ರ ವರ್ಷವನ್ನು ನಮ್ಮೆಲ್ಲರ ಉತ್ತಮ ಭವಿಷ್ಯದೆಡೆಗೆ ಕೊಂಡೊಯ್ಯಲು ಪ್ರಯತ್ನಿಸೋಣ. ಪ್ರೀತಿ ಆದರಗಳಿಂದ ಎಲ್ಲರೊಂದಿಗೆ ಬೆರೆತು ಗೌರವದಿಂದ ಬದುಕೋಣ. 2023ರ ವರ್ಷ ನಮ್ಮೆಲ್ಲರಿಗೂ ಅತ್ಯಂತ ಹರ್ಷದಾಯಕ ವರ್ಷವಾಗಿದ್ದು, ಎಲ್ಲರಿಗೂ ಸುಖ ಸಂತೋಷ, ನೆಮ್ಮದಿ, ಉತ್ತಮ ಆರೋಗ್ಯ, ವ್ಯವಹಾರದಲ್ಲಿ ಅಭಿವೃದ್ಧಿ ಸಿಗಲಿ ಎಂದು ಶ್ರೀ ವರಸಿದ್ಧಿ ವಿನಾಯಕನಲ್ಲಿ ಪ್ರಾರ್ಥಿಸುತ್ತೇನೆ.

ಡಿಸೆಂಬರ್ ತಿಂಗಳಲ್ಲಿ ಸಂಘದಲ್ಲಿ ಅನೇಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದಿವೆ. ಶ್ರೀ ನಿರಂಜನ್ ಶೆಟ್ಟಿಯವರ ನೇತೃತ್ವದಲ್ಲಿ ವೈದ್ಯಕೀಯ ವಿಭಾಗ ಹಾಗೂ ಶ್ರೀ ಸುದೀಪ್ ನಾಯಕ್‌ರವರ ನೇತೃತ್ವದ ಸಮಾಜ ಸೇವಾ ವಿಭಾಗದಿಂದ ನಡೆದ ಶಿಬಿರ, ಶ್ರೀಮತಿ ಜಯಶ್ರೀ ಸಿ. ರೈಯವರ ಮುಂದಾಳತ್ವದಲ್ಲಿ ನಡೆದ ಸಾಂಸ್ಕೃತಿಕ ಸ್ಪರ್ಧೆಗಳು, ಶ್ರೀ ಕಿರಣ್ ಶೆಟ್ಟಿಯವರ ಮುಂದಾಳತ್ವದಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳು, ಶ್ರೀ ರಮೇಶ್ ಜಿ. ಶೆಟ್ಟಿಯವರ ನೇತೃತ್ವದ ಯಕ್ಷಗಾನ ಹಾಗೂ ರಂಗ ತರಬೇತಿ ವಿಭಾಗದಿಂದ ನಡೆದ ಅದ್ದೂರಿ ಯಕ್ಷಗಾನ ಕಾರ್ಯಕ್ರಮಗಳೆಲ್ಲವೂ ಸದಸ್ಯರಿಗೆ ಸಂತಸವನ್ನುಂಟು ಮಾಡಿದೆ. ಅಲ್ಲದೇ ಸೇವಾದಳ, ಮೈಂಟೇನೆನ್ಸ್ ಇನ್ನಿತರ ಉಪಸಮಿತಿಗಳೆಲ್ಲವೂ ತಮ್ಮ ಕೆಲಸದಲ್ಲಿ ತೊಡಗಿಕೊಂಡಿವೆ. ಯುವ ವಿಭಾಗದ ಚೇರ್‌ಪರ್ಸನ್‌ರಾದ ಸಿಎ. ಕಿಶೋರ್ ಶೆಟ್ಟಿ, ಸಂಚಾಲಕರಾದ ಶ್ರೀ ಮಧುಸೂಧನ್ ಶೆಟ್ಟಿ ಹಾಗೂ ಸದಸ್ಯರಿಂದ ಅದ್ದೂರಿಯಾದ ಹೊಸವರ್ಷ ಸಂಭ್ರಮಾಚರಣೆ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದ ಯಶಸ್ಸಿಗಾಗಿ ಕೈ ಜೋಡಿಸಿದ ಎಲ್ಲಾ ಸಹೃದಯಿ ಸದಸ್ಯರಿಗೆ ಧನ್ಯವಾದಗಳು. ಸಂಘದ ಎಲ್ಲಾ ಉಪಸಮಿತಿಗಳ ಚೇರ್‌ಪರ್ಸನ್, ಸಂಚಾಲಕರು ಹಾಗೂ ಎಲ್ಲಾ ಸದಸ್ಯರಿಗೆ ಈ ಮೂಲಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಯಕ್ಷಗಾನ ಕಾರ್ಯಕ್ರಮದಂದು ಅತಿಥಿಗಳಾಗಿ ಆಗಮಿಸಿದ ಜನಪ್ರಿಯ ಚಲನಚಿತ್ರ ನಿರ್ದೇಶಕ ಹಾಗೂ ಖ್ಯಾತ ಸಾಹಿತಿ ಶ್ರೀ ನಾಗತಿಹಳ್ಳಿ ಚಂದ್ರಶೇಖರ, ಮಣಿಪಾಲ ಆಸ್ಪತ್ರೆಗಳ ಮುಖ್ಯಸ್ಥರಾದ ಡಾ. ಸುದರ್ಶನ ಬಲ್ಲಾಳರವರಿಗೆ ಧನ್ಯವಾದಗಳು. ಪ್ರಶಸ್ತಿ ಸ್ವೀಕಾರ ಮಾಡಿದ ಶ್ರೀ ಕಂದಾವರ ರಘುರಾಮ ಶೆಟ್ಟಿಯವರಿಗೆ ಮತ್ತು ಶ್ರೀ ಪೆರುವಾಯಿ ನಾರಾಯಣ್ ಶೆಟ್ಟಿಯವರಿಗೆ ಪ್ರೀತಿ ಪೂರ್ವಕ ಧನ್ಯವಾದಗಳು. ಈ ಎಲ್ಲಾ ಕಾರ್ಯಗಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಪ್ರೀತಿಯ ಧನ್ಯವಾದಗಳು.

The year 2023 has begun with new hopes, new resolutions with lots of positivity and good energy. Life is about change, sometimes it's painful, sometimes it's beautiful, but most of the time it's both. So, we have to take right decisions as to how we could make this year a wonderful one. I wish all our esteemed members and their loved ones a great year 2023, with success, happiness, good health and everything that our heart desires. Have a fabulous year 2023.

ಸಂಘದ ಸರ್ವ ಸದಸ್ಯರಿಗೂ ಮಕರ ಸಂಕ್ರಾಂತಿಯ ಶುಭಾಶಯಗಳು.

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

hegdemm@gmail.com

# ಗೌರವ ಕಾರ್ಯದರ್ಶಿಗಳ ವರದಿ



**ಮಾನ್ಯ ಸದಸ್ಯ ಬಾಂಧವರೇ,**

ತಮಗೆಲ್ಲರಿಗೂ 2023 ಹೊಸ ವರ್ಷದ ಹಾಗೂ ಮಕರ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು.

ಸಂಘದಲ್ಲಿ ಕಾರ್ಯಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಸಂಘದ ಯಕ್ಷಗಾನ ಸಮಿತಿಯು ದಿನಾಂಕ 24.12.2022 ರಂದು ಆಯೋಜಿಸಿದ್ದ 'ಯಕ್ಷತರಂಗ' ಕಾರ್ಯಕ್ರಮ ವಿಭಿನ್ನವಾಗಿ ಮೂಡಿಬಂತು. ಸಂಘದ ರಂಗ ತರಬೇತಿಯ ವಿದ್ಯಾರ್ಥಿಗಳ ಪ್ರಪ್ರಥಮ ರಂಗಪ್ರದರ್ಶನ 'ಸತ್ಯಮೇವ ಜಯತೇ', ಸಂಘದ ಬಾಲಕಲಾವಿದರು ಪ್ರಸ್ತುತ ಪಡಿಸಿದ 'ಶಶಿಪ್ರಭಾ ಪರಿಣಯ', ಮಹಿಳೆಯರಿಂದ 'ರತಿಕಲ್ಯಾಣ', ಸಂಘದ ಹವ್ಯಾಸಿ ಕಲಾವಿದರು ನಡೆಸಿಕೊಟ್ಟ 'ಸುಧನ್ವಾರ್ಜುನ', ಕರಾವಳಿ ಯಕ್ಷಮಿತ್ರರು ನಡೆಸಿಕೊಟ್ಟ 'ವೀರೋಚನ ಕಾಳಗ' ಯಕ್ಷಗಾನ ಪದ್ರರ್ಶನಗಳು ಯಕ್ಷಪ್ರಿಯರ ಮೆಚ್ಚುಗೆಗೆ ಪಾತ್ರವಾಯಿತು. ಸಂಜೆ ನಡೆದ ಸಭಾ ಕಾರ್ಯಕ್ರಮದಲ್ಲಿ ಮಣಿಪಾಲ ಆಸ್ಪತ್ರೆಯ ಚೇರ್‌ಮೆನ್ ಡಾ. ಹೆಚ್. ಎಸ್. ಬಲ್ಲಾಳ್, ಚಲನಚಿತ್ರ ನಿರ್ದೇಶಕರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಇವರ ಸಮ್ಮುಖದಲ್ಲಿ ಖ್ಯಾತ ಯಕ್ಷಗಾನ ಪ್ರಸಂಗಕರ್ತರಾದ ಕಂದಾವರ ರಘುರಾಮ ಶೆಟ್ಟಿ ಹಾಗೂ ಹಿರಿಯ ಯಕ್ಷಗಾನ ಕಲಾವಿದ ಶ್ರೀ ಪೆರುವಾಯಿ ನಾರಾಯಣ ಶೆಟ್ಟಿಯವರನ್ನು ಗೌರವಿಸಲಾಯಿತು. ವಿಭಿನ್ನ ಕಾರ್ಯಕ್ರಮವನ್ನು ಆಯೋಜಿಸಿದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕ ಹರಿಪ್ರಸಾದ್ ಶೆಟ್ಟಿ ಹಾಗೂ ತಂಡದ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಯುವವಿಭಾಗದ ಆಶ್ರಯದಲ್ಲಿ ಆಯೋಜಿಸಿದ 2023 ಹೊಸವರ್ಷವನ್ನು ಸ್ವಾಗತಿಸುವ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು. ನೃತ್ಯ, ಮೋಜಿನ ಆಟ, ಸಂಗೀತ ಮೊದಲಾದ ಕಾರ್ಯಕ್ರಮಗಳೊಂದಿಗೆ ಎಳೆಯ ವಯಸ್ಸಿನಿಂದ ಹಿಡಿದು ವಯೋವೃದ್ಧ ಸದಸ್ಯ ಬಾಂಧವರು ಹೊಸವರ್ಷದ ಹರ್ಷಾಚರಣೆಯಲ್ಲಿ ಪಾಲ್ಗೊಂಡರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿರುವ ಯುವ ವಿಭಾಗದ ಚೇರ್‌ಪರ್ಸನ್ ಸಿಎ. ಕಿಶೋರ್ ಶೆಟ್ಟಿ, ಸಂಚಾಲಕ ಮಧುಸೂದನ್ ಶೆಟ್ಟಿ ಹಾಗೂ ಯುವತಂಡಕ್ಕೆ ಅಭಿನಂದನೆಗಳು. ಸಾಂಸ್ಕೃತಿಕ ಸಮಿತಿಯ ಆಯೋಜನೆಯಲ್ಲಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ಸ್ಪರ್ಧೆಗಳಿಗೆ ದಿನಾಂಕ 11.12.2022 ರಂದು ವಿದ್ಯುಕ್ತವಾಗಿ ಚಾಲನೆ ನೀಡಿ ವಿವಿಧ ಸ್ಪರ್ಧೆಗಳನ್ನು ಅಚ್ಚುಕಟ್ಟಾಗಿ ಆಯೋಜಿಸಲಾಗಿತ್ತು. ಇನ್ನುಳಿದ ಸ್ಪರ್ಧೆಗಳನ್ನು ಜನವರಿ ತಿಂಗಳ 14 ಮತ್ತು 15 ರಂದು ಆಯೋಜಿಸಲಾಗಿದೆ. ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಜಯಶ್ರೀ ಸಿ. ರೈ, ಸಂಚಾಲಕ ಶ್ರೀ ಮಹೇಶ್ ಶೆಟ್ಟಿ ಮತ್ತು ತಂಡದ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು.

ದಿನಾಂಕ 10.12.2022 ರಂದು ಜಯನಗರದ ಕಿತ್ತೂರು ರಾಣಿ ಚೆನ್ನಮ್ಮ ಕ್ರೀಡಾಂಗಣದಲ್ಲಿ ವಾಲಿಬಾಲ್ ಪಂದ್ಯಾವಳಿಯನ್ನು ಹಾಗೂ ಜನವರಿ ತಿಂಗಳ 7 ಮತ್ತು 8 ರಂದು ಜಾಲಹಳ್ಳಿಯ ಎಚ್.ಎಂ.ಟಿ. ಮೈದಾನದಲ್ಲಿ ಕ್ರಿಕೆಟ್ ಮತ್ತು ಥ್ರೋಬಾಲ್ ಪಂದ್ಯಾವಳಿಗಳನ್ನು ಕ್ರೀಡಾ ಸಮಿತಿಯ ಚೇರ್‌ಮೆನ್ ಶ್ರೀ ಎಂ. ಕಿರಣ್ ಕುಮಾರ್ ಶೆಟ್ಟಿ, ಸಂಚಾಲಕ ಶ್ರೀ ನಿತ್ಯರಂಜನ್ ಹೆಗ್ಡೆ ಹಾಗೂ ತಂಡದ ನೇತೃತ್ವದಲ್ಲಿ ಆಯೋಜಿಸಲಾಗಿತ್ತು. ಕಳೆದ 3 ತಿಂಗಳಿನಿಂದ ಸಂಘದಲ್ಲಿ ನಡೆಯುತ್ತಿರುವ ಎಲ್ಲಾ ಕಾರ್ಯಕ್ರಮಗಳಿಗೆ ಕುಡಿಯುವ ನೀರು ಹಾಗೂ ತಂಪು ಪಾನೀಯಗಳ ಪ್ರಾಯೋಜಕತ್ವ ನೀಡುತ್ತಿರುವ ಕ್ರೀಡಾ ಸಮಿತಿಯ ಚೇರ್‌ಪರ್ಸನ್‌ರಾದ ಶ್ರೀ ಕಿರಣ್ ಕುಮಾರ್ ಶೆಟ್ಟಿಯವರಿಗೆ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ದಿನಾಂಕ 06.01.2023 ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನದ ನರ್ಸರಿ ಹಾಗೂ ಸಿಬಿಎಸ್‌ಸಿ ವಿಭಾಗದ ವಾರ್ಷಿಕೋತ್ಸವವು ಸಂಘದ ಸಭಾಂಗಣದಲ್ಲಿ ವಿಜೃಂಭಣೆಯಿಂದ ಜರುಗಿತು. ನಿವೃತ್ತ ವಿಂಗ್ ಕಮಾಂಡರ್ ಡಾ. ಆರ್.ಕೆ. ಮಂಡಲ್, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಎ. ಆನಂದರಾಜ್, ಬಿಗ್‌ಬಾಸ್ ಸೀಸನ್ 9 ರ ವಿಜೇತ ಶ್ರೀ ರೂಪೇಶ್ ಶೆಟ್ಟಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯು ದಿನಾಂಕ 26.01.2023ರಂದು ಸಂಘದ ಆವರಣದಲ್ಲಿ ನಡೆಯಲಿದ್ದು, ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಇಂತಿ ತಮ್ಮ ಪ್ರೀತಿಯ,

**ಬಿ. ಆನಂದರಾಮ ಶೆಟ್ಟಿ**
ಗೌರವ ಕಾರ್ಯದರ್ಶಿ


Creating life - long bonds
Since 19 Years
HOME FOR ALL
RERA Approved
JUST PAY ₹50K
TO BOOK YOUR DREAM HOME
BUDGET FLATS 18 LAKHS ONWARDS
COST INCLUDING GST
SAI MATHA GARDEN
SURATHKAL, MANGALORE
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
NEAR TO BEACH & RAILWAY STATION
INTERNATIONAL AIRPORT ROAD, SURATHKAL
MATHA SHABARI RESIDENCY
NH-66, MUKKA
MATHA SUSHIGANGA RESIDENCY
NH-66 MULKY
MATHA GANGA RESIDENCY
PADMANOOR
MATHA NANDINI RESIDENCY
PAKSHIKERE
MATHA RESIDENCY
NH-66, PADUBIDRI
MATHA GURU RESIDENCY
NH-66, PADUBIDRI
Project Approved in all Nationalized Bank
MATHA Builders & Developers
Developers Pvt. Ltd.
SURATHKAL: Thara Towers, 2nd Floor, International Airport Road, Surathkal, Mangaluru - 575 014.
MUMBAI: Shop No. 8, Bldg. No. 1, New Venkateshwar Nagar, Cabin Road Bhayandar, (E), Thane Dist - 401 105.
7259209966
7022481666
mathadevelopers108@gmail.com
www.mathadevelopers.com
CREDAI
9980711966
7259269966(Mumbai)
Best Investment with Assured Rental Return

ADVT.

Shree Durgaparameshwari Educational Trust (Regd.)

College Code: AS1005

# J S Pre-University College

(Recgd. by Govt. of Karnataka)

# J S Degree College

(Affiliated to Bangalore University)

# 198, Balagangadhar Nagar, Kengunte, Near Dr. Ambedkar Engg.College Signal,
Mallathahalli, Bengaluru - 560 056. Ph: 080-23218381 ; M: 8884666558
E-mail: info@jspuc.com | Website: www.jspuc.com




"We ensure academic excellence and discipline"

*"An institution with the determination and commitment to materialize the desired objectives through brilliant academic brains".*

## COURSES OFFERED

**PUC - SCIENCE:** P C M B, P C M Cs., P C M E
**PUC - COMMERCE:** B A S Cs., E B A Cs., E B A S
**Languages:** English, Kannada, Hindi, Sanskrit

**Facilities:**
CET / NEET / JEE / KVPY / NATA / CA - Foundation, IAS Integrated

**Degree Courses:** B.Com, BBA, BCA




**Enrol Now**
E-mail: info@jspuc.com | Website: www.jspuc.com

## Our First Batch of II PUC Annual Exam Results: 2022 State Rank Holders



**Madhushree S. Shetty**
PCMB: Total - 589 (98.16%)
Phy: 100 ; Maths: 100 ; Chem: 99
Bio: 99 ; Kan: 99 ; Eng: 92
**State 8th Rank**



**Moulya R. Gowda**
PCMB: Total - 587 - (97.8%)
Phy: 100 ; Maths: 100 ; Chem: 100
Bio: 100 ; Kan: 94 ; Eng: 93
**State 10th Rank**



**Pooja J. Yadav**
BASC: Total - 580 - (96.66%)
B: 99 ; S: 98 ; A: 97 ; E: 96
H: 96 ; C: 94
**State 15th Rank**



**Sujal Kumar R.**
PCMB: Total - 576 - (96%)
Phy: 95 ; Maths: 100 ; Chem: 94
Bio: 96 ; Hin: 99 ; Eng: 92
**State 20th Rank**



**Prof. Dr. Jayarama Shetty S.**
M.A., M.Ed., M.Sc., M.B.A., Ph.D., P.G.D.P.M.I.R., F.M.S.P.I., D.B.M.
Founder / Director

An epitome in the field of education. A renowned educationist, philanthropist and psychologist who has been a catalyst in many success stories. Dr. Shetty has been mentoring, guiding, counselling and nurturing students for over a period of four decades, both in Mangalore and Bangalore. He has been persistent in seeking remarkable results with ranks and distinction by adopting innovative pedagogy.

**For more information on Admission Contact:**
**Ph: 080-23218381**
**M: 8884666558**

ADVT.

# ಬಂಟರ ಸಂಘ ಬೆಂಗಳೂರು
# BUNTS' SANGHA BANGALORE

## ಬಂಟ್ಸ್ ಸೇವಾದಳ

ಬೆಂಗಳೂರು ಬಂಟರ ಸಂಘದ ಬಂಟ್ಸ್ ಸೇವಾದಳದ ವತಿಯಿಂದ ಬೇಕರಿ, ಕಾಂಡಿಮೆಂಟ್ಸ್, ಬೀಡಾ ಅಂಗಡಿ, ಹೋಟೆಲ್ ಮತ್ತು ಸಣ್ಣಪುಟ್ಟ ಅಂಗಡಿಗಳಲ್ಲಿ ತೊಂದರೆಯಾದಂತಹ ಸಂದರ್ಭದಲ್ಲಿ ಅಗತ್ಯ ಸಹಾಯ ಹಾಗೂ ಸಹಕಾರ ನೀಡಲು ಬಂಟ್ಸ್ ಸೇವಾದಳ ಸದಾ ಸಿದ್ಧವಿದೆ. ಬೆಂಗಳೂರಿನಲ್ಲಿ ನೆಲೆಸಿರುವ ಬಂಟರಿಗೆ ಯಾವುದೇ ರೀತಿಯ ತೊಂದರೆಯಾದಂತಹ ಸಂದರ್ಭಗಳಲ್ಲಿ ಬಂಟ್ಸ್ ಸೇವಾದಳ ಸದಸ್ಯರು ಅಲ್ಲಿಗೆ ಧಾವಿಸಿ ಸಮಸ್ಯೆ ಪರಿಹರಿಸುವ ಕಾರ್ಯ ಮಾಡಲಿದ್ದಾರೆ.

ಅವಘಡ, ದೌರ್ಜನ್ಯ, ಅಪಘಾತ ಇನ್ನಿತರ ಸಂದರ್ಭದಲ್ಲಿ ತಕ್ಷಣ ಬಂಟ್ಸ್ ಸೇವಾದಳ ಸದಸ್ಯರು ತಮ್ಮಲ್ಲಿಗೆ ಆಗಮಿಸಿ ಸಲಹೆ ಸೂಚನೆಯನ್ನು ನೀಡಿ ಸೂಕ್ತ ಪರಿಹಾರ ಕಂಡುಕೊಳ್ಳುವಲ್ಲಿ ಸಹಾಯ ಹಸ್ತವನ್ನು ನೀಡಲಿದೆ.

ಸದಸ್ಯರು ತೊಂದರೆಯಾದ ಸಂದರ್ಭದಲ್ಲಿ ಸಂಪರ್ಕಿಸಬಹುದಾದ
ಮೊಬೈಲ್ ಸಂಖ್ಯೆ : 9741220559, 7022119739

ಕಾನೂನು ಸಲಹೆ ಅವಶ್ಯಕತೆ ಇದ್ದಲ್ಲಿ ಸಂಘದ ಸದಸ್ಯ ನ್ಯಾಯವಾದಿಗಳಿಂದ ಸಹಕಾರ ಪಡೆಯಲು ನಾವು ಬಂಟರ ಸಂಘದ ವತಿಯಿಂದ ಸಹಕರಿಸುತ್ತೇವೆ.

ಆನಂದರಾಮ ಶೆಟ್ಟಿ ಬಿ.
ಗೌರವ ಕಾರ್ಯದರ್ಶಿ

ಎಂ. ಮುರಲೀಧರ ಹೆಗ್ಡೆ
ಅಧ್ಯಕ್ಷರು

ಸತೀಶ್ ಶೆಟ್ಟಿ
ಸಂಚಾಲಕರು, ಬಂಟ್ಸ್ ಸೇವಾದಳ

ಉಮೇಶ್ ಕುಮಾರ್ ಶೆಟ್ಟಿ
ಚೇರ್‌ಪರ್ಸನ್, ಬಂಟ್ಸ್ ಸೇವಾದಳ

# Sandwich Generation



Samanvitha Shetty

I am part of the generation who has seen parents having 6-8 or even more siblings, grandparents in their old age who are tired fulfilling the needs and wants of life. Life was drifting from large joint families to small nuclear family. I grew and became part of one more generation where we have 1 or 2 kids, and these kids have healthy and energetic grandparents. So, I treat myself like a filling between these two generations who adds taste to the sandwich and is tasty on its own as well. We know what we enjoyed, we know what our kids missed, we also enjoyed what our kids enjoyed and lived a journey which is an experience of lifetime. Seeing the change of one century to another was no different from any other New Year's Eve but being part of the sandwich generation is the luckiest experience anyone can wish for.



I enjoyed spending my vacations with house full of cousins and extended family members. The joy of fighting for a space to sleep, long queue outside one bathroom for the whole house, playing hide and seek with elders, being carefree while walking through the streets are some experiences which form our personality, and some become memories which always leave a smile when we think about it. I grew up listening to stories from my dad about walking miles together everyday to go to school and now I am growing to see my daughter using elevator to even walk down the stairs. The experience we had bind us with our larger extended family and helps us teach our new generation the value of family in this nuclear world. Those days improved my memory because if I had to share something with my cousin, I had to wait till we met. The experience of sharing was personal. Today, even a random friend on Facebook knows what am I doing and where did I go?

We all keep listening to a statement "change is the only constant". During our growing days there was an added catalyst to this change called ***"SPEED".*** As time passed everything caught speed. People could talk to each other immediately. So, when they met, they had nothing to share. We could travel to places within no time. So, we started exploring tourist place and reduced spending vacation with extended family. Our parents became grandparents when they still had energy and enthusiasm in life. This made them become care takers for grandchildren rather than carefree enjoyment of innocence. Children grew up so fast that they are their own guide and started feeling rest of the world is way behind their futuristic thoughts.

Among all these speedy changes came the speed breaker: Covid 19. This made us halt and relive our life. Sandwich generation who enjoyed life of both worlds is given opportunity to recreate magic.

We are the ones who know what we had, what we got and what is being missed. We are the ones who know how present day can be made interesting. Because we lived when colour TV and land-line came to our life and also this changed to internet TV and mobile phones. So here is the chance. Working parents can spend time with their growing kids. Care taking grandparents can become carefree again. Being locked down reinvented the joy of meeting family and friends. Covid changed our perception of looking at crowd and traffic. Covid acted as a negative catalyst to speed and remains as a positive catalyst to change.

We still want to take break from our routine life but now we want to be with family. We still want to update Facebook and Whats app status but also want to know our family and friends safety first. We are given the opportunity to help our new generation understand the value of life along with a reminder to self and make our older generation proud by not letting them down by forgetting what they taught us about life.

***Life values us if we value life.***

Let's not wait for another pandemic to teach us to value the value of what we have. Our older generation gave us a lively childhood, soulful youth and taught us to show gratitude towards what we have. Let's pass it on to our future and teach them to add more taste to the ***Sandwich***.

---


# ಬಂಟರ ಸಂಘ ಬೆಂಗಳೂರು

## ಬಂಟ್ಸ್ ಸೇವಾದಳ

ಹುಟ್ಟು ಹಾಗೂ ಸಾವು ಮನುಷ್ಯ ಜೀವನದ ಸಹಜ ಪ್ರಕ್ರಿಯೆಗಳಾಗಿದ್ದು, ಬೆಂಗಳೂರು ಹಾಗೂ ಸುತ್ತಮುತ್ತ ನೆಲೆಸಿರುವ ಸಮಾಜ ಬಾಂಧವರ ನಿಧನದ ಸಂದರ್ಭದಲ್ಲಿ ಬಂಟ್ಸ್ ಸೇವಾದಳ ಸಮಿತಿಯ ವತಿಯಿಂದ ಮೃತರ ಅಂತ್ಯಕ್ರಿಯೆ ವಿಧಿ–ವಿಧಾನ ನೆರವೇರಿಸಲು ಅಗತ್ಯ ಸಹಕಾರ / ಮಾಹಿತಿ ನೀಡಲು ಹಾಗೂ ಅಂತ್ಯಕ್ರಿಯೆಗೆ ಬೇಕಾಗುವ ಸಾಮಾಗ್ರಿ ಮತ್ತು ಇನ್ನಿತರ ಮಾಹಿತಿಯನ್ನು ಒದಗಿಸಲು ನಿರ್ಧರಿಸಲಾಗಿದೆ. ಸದಸ್ಯ ಬಾಂಧವರು ತುರ್ತು ಸಂದರ್ಭದಲ್ಲಿ ಈ ಕೆಳಗಿನ ಮೊಬೈಲ್ ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

**ಮೊ : 97412 20559 / 70221 19739.**

| | |
|---|---|
| **ಆನಂದರಾಮ ಶೆಟ್ಟಿ ಬಿ.**<br>ಗೌರವ ಕಾರ್ಯದರ್ಶಿ | **ಎಂ. ಮುರಲೀಧರ ಹೆಗ್ಡೆ**<br>ಅಧ್ಯಕ್ಷರು |
| **ಸತೀಶ್ ಶೆಟ್ಟಿ. ವಾಲ್ದೂರು**<br>ಸಂಚಾಲಕರು, ಬಂಟ್ಸ್ ಸೇವಾದಳ | **ಉಮೇಶ್ ಕುಮಾರ್ ಶೆಟ್ಟಿ**<br>ಚೇರ್‌ಪರ್ಸನ್, ಬಂಟ್ಸ್ ಸೇವಾದಳ |

# ಬಂಟರ ಸಂಘ ಬೆಂಗಳೂರು - ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ ಯಕ್ಷತ'ರಂಗ'




ಸಂಘದ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ವತಿಯಿಂದ ದಿನಾಂಕ 24.12.2022ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ 'ಯಕ್ಷತರಂಗ' ಎನ್ನುವ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಚಿತ್ರ ಕಲಾವಿದರಿಗಾಗಿ ಯಕ್ಷ–ಚಿತ್ರ ಸ್ಪರ್ಧೆಯನ್ನು ಆಯೋಜಿಸಲಾಗಿದ್ದು, ಉತ್ತಮ ಚಿತ್ರಗಳ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದ ಕಲಾವಿದರಿಗೆ ಅಭಿನಂದನಾ ಪತ್ರ ಹಾಗೂ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು.




ಸಂಘದ ರಂಗತರಬೇತಿಯ ಮಕ್ಕಳಿಂದ ಶ್ರೀ ಸದಾಶಿವ ರೈ ನೀನಾಸಂ ಇವರ ನಿರ್ದೇಶನದಲ್ಲಿ ಮೂಡಿಬಂದ 'ಸತ್ಯಮೇವ ಜಯತೇ' ರಂಗ ಪ್ರಯೋಗವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ ಶಿವಕುಮಾರ್ ಬೇಗಾರ್ ಇವರ ನಿರ್ದೇಶನದಲ್ಲಿ ಸಂಘದ ಮಹಿಳಾ ಸದಸ್ಯರಿಂದ 'ರತಿ ಕಲ್ಯಾಣ', ಸಂಘದ ಬಾಲ ಕಲಾವಿದರಿಂದ 'ಶಶಿಪ್ರಭಾ ಪರಿಣಯ', ಸಂಘದ ಪುರುಷ ಸದಸ್ಯರಿಂದ 'ಸುಧನ್ವಾರ್ಜುನ ಕಾಳಗ', ಪ್ರಸಿದ್ಧ ಅತಿಥಿ ಕಲಾವಿದರಿಂದ ತೆಂಕುತಿಟ್ಟು ಯಕ್ಷಗಾನ ವಿರೋಚನ ಕಾಳಗ ಈ ಎಲ್ಲಾ ಯಕ್ಷಗಾನ ಕಾರ್ಯಕ್ರಮಗಳು ಯಕ್ಷಪ್ರೇಮಿಗಳಿಗೆ ರಸದೌತಣವನ್ನು ನೀಡಿತು.



ಸಂಜೆ ನಡೆದ ಸಭಾಕಾರ್ಯಕ್ರಮದಲ್ಲಿ ಬೆಂಗಳೂರು ಮಣಿಪಾಲ್ ಆಸ್ಪತ್ರೆಯ ಚೇರ್‌ಮೆನ್ ಡಾ. ಹೆಚ್. ಸುದರ್ಶನ್ ಬಲ್ಲಾಳ್, ಖ್ಯಾತ ಚಲನಚಿತ್ರ ನಿರ್ದೇಶಕರಾದ ಶ್ರೀ ನಾಗತಿಹಳ್ಳಿ ಚಂದ್ರಶೇಖರ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಡಾ. ಹೆಚ್.ಎಸ್. ಬಲ್ಲಾಳ್‌ರವರು ಬಂಟರ ಸಮಾಜವು ಸಮಾಜದಲ್ಲಿರುವ ಯಕ್ಷಗಾನದ ಪ್ರತಿಭೆಗಳನ್ನು ಗುರುತಿಸುವುದು ಮಾತ್ರವಲ್ಲದೇ ಯಕ್ಷಗಾನ ಲೋಕದ ಹಿರಿಯ ಕಲಾವಿದರು ಮತ್ತು ಪ್ರಸಂಗಕರ್ತರನ್ನು ಗುರುತಿಸುವುದು ಹೆಮ್ಮೆಯ ವಿಷಯವೆಂದರು. ಶ್ರೀ ನಾಗತಿಹಳ್ಳಿ ಚಂದ್ರಶೇಖರ್‌ರವರು ಮಾತನಾಡಿ ಹೃದಯ ಶ್ರೀಮಂತಿಕೆ ಹಾಗೂ ಕಲಾ ಶ್ರೀಮಂತಿಕೆಯಲ್ಲಿ ಬಂಟ ಸಮಾಜವು ಬಹಳ ಮುಂಚೂಣಿಯಲ್ಲಿದೆ ಹಾಗೂ ಉತ್ತಮ ಪ್ರತಿಭೆಗಳನ್ನು ಆಯ್ಕೆ ಮಾಡಿ ವೇದಿಕೆಯನ್ನು ನೀಡಿ ಅವರಿಗೆ ರಂಗ ಪ್ರವೇಶವನ್ನು ಮಾಡಿಸಿ ಒಳ್ಳೆಯ ಕಲಾವಿದರನ್ನು ಹೊರಜಗತ್ತಿಗೆ ನೀಡುತ್ತಿರುವ ಸಮಾಜ ಎಂದು ಶ್ಲಾಘಿಸಿದರು.



ಖ್ಯಾತ ಹಿರಿಯ ಯಕ್ಷಗಾನ ಪ್ರಸಂಗಕರ್ತರಾದ ಶ್ರೀ ಕಂದಾವರ ರಘುರಾಮ ಶೆಟ್ಟಿ ಮತ್ತು ಖ್ಯಾತ ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀ ಪೆರುವಾಯಿ ನಾರಾಯಣ ಶೆಟ್ಟಿಯವರು ಬಂಟ ಸಮುದಾಯದಲ್ಲಿ ಯಕ್ಷಗಾನ ಲೋಕಕ್ಕೆ ನೀಡಿದ ಅಭೂತಪೂರ್ವ ಸೇವೆಯನ್ನು ಗುರುತಿಸಿ ಗೌರವಧನ ಹಾಗೂ ಸ್ಮರಣಿಕೆಯನ್ನು ನೀಡಿ ಗಣ್ಯರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆಯವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಉಪಾಧ್ಯಕ್ಷರುಗಳಾದ ಡಾ. ಜಗದೀಶ್ ವಿ. ಶೆಟ್ಟಿ, ಶ್ರೀಮತಿ ಗೀತಾಂಜಲಿ ಡಿ. ಅಜಿಲ, ಗೌರವ ಕಾರ್ಯದರ್ಶಿ ಶ್ರೀ ಆನಂದರಾಮ ಶೆಟ್ಟಿ ಬಿ., ಜೊತೆ ಕಾರ್ಯದರ್ಶಿ ಶ್ರೀಮತಿ ಶ್ಯಾಮಲ ಶೆಟ್ಟಿ, ಖಜಾಂಚಿ ಶ್ರೀ ಅಮರನಾಥ ಶೆಟ್ಟಿ, ಯಕ್ಷಗಾನ ಮತ್ತು ರಂಗತರಬೇತಿಯ ಚೇರ್‌ಪರ್ಸನ್ ಶ್ರೀ ರಮೇಶ್ ಜಿ. ಶೆಟ್ಟಿ, ಸಂಚಾಲಕರಾದ ಶ್ರೀ ಹರಿಪ್ರಸಾದ್ ಶೆಟ್ಟಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಪ್ರಾಯೋಜಕರುಗಳಿಗೆ ವೇದಿಕೆಯಲ್ಲಿ ವೀಳ್ಯವನ್ನು ಹಾಗೂ ಸ್ಮರಣಿಕೆಯನ್ನು ನೀಡಿ ಗೌರವಿಸಲಾಯಿತು.


**ಕಾರ್ಯಕ್ರಮದಕ್ಕೆ ದೇಣಿಗೆ ಹಾಗೂ ಪ್ರಾಯೋಜಕತ್ವವನ್ನು ನೀಡಿದವರು;**

ಶ್ರೀ ಸಂತೋಷ್ ಕುಮಾರ್ ಶೆಟ್ಟಿ, ಮೈತ್ರಿ ಗ್ರೂಪ್
ಡಾ. ಸುರೇಂದ್ರ ಶೆಟ್ಟಿ
ಶ್ರೀ ಜಿತೇಂದ್ರ ಶೆಟ್ಟಿ ಎ.ವಿ.
ಶ್ರೀ ಪ್ರಮೋದ್‌ಚಂದ್ರ ಭಂಡಾರಿ
ಗಣೇಶ್ ಎಂಟರ್‌ಪ್ರೈಸಸ್
ಶ್ರೀ ವಿಜಯ್ ಕುಮಾರ್ ಶೆಟ್ಟಿ
ಶ್ರೀಮತಿ ಜ್ಯೋತಿ
ಶ್ರೀಮತಿ ಭಾರತಿ
ಶ್ರೀ ಉದಯ್ ಹೆಗ್ಡೆ
ಶ್ರೀ ಅಮರನಾಥ ಶೆಟ್ಟಿ
ಶ್ರೀ ರಮೇಶ್ ಶೆಟ್ಟಿ
ಶ್ರೀಮತಿ ಹೀರಾ ಹೆಗ್ಡೆ
ಸಿ.ಎ. ಕಿಶೋರ್ ಶೆಟ್ಟಿ
ಶ್ರೀಮತಿ ತಾರಾಮಣಿ ಹೆಗ್ಡೆ
ಶ್ರೀ ರಮಿತ್ ಬಿ. ಶೆಟ್ಟಿ
ಶಂಕರನಾರಾಯಣ ಕನ್ಸ್ಟ್ರಕ್ಷನ್
ಶ್ರೀ ಮುರಲೀಧರ ಹೆಗ್ಡೆ ಎಂ.
ಶ್ರೀ ಅಜಿತ್ ಪಡಿವಾಲ್
ಶ್ರೀ ಶ್ರೀನಿವಾಸ ಸೂಡ
ಶ್ರೀ ಸುಕುಮಾರ್ ಶೆಟ್ಟಿ
ಶ್ರೀಮತಿ ಶಾಂತಲಾ
ಶ್ರೀಮತಿ ಜಯಶ್ರೀ ಶೆಟ್ಟಿ
ಡಾ. ಜಗದೀಶ್ ವಿ. ಶೆಟ್ಟಿ
ಶ್ರೀ ದೀಪಕ್ ಶೆಟ್ಟಿ
ಶ್ರೀ ಜಗನ್ನಾಥ್
ಶ್ರೀ ಸುಧಾಕರ್ ಶೆಟ್ಟಿ
ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ

ಯಕ್ಷಗಾನ ಕಾರ್ಯಕ್ರಮದಲ್ಲಿ ಭಾಗವಹಿಸಿ ನಮ್ಮನ್ನು ಪ್ರೋತ್ಸಾಹಿಸಿದ ಎಲ್ಲಾ ಯಕ್ಷ ಪ್ರೇಮಿಗಳಿಗೆ ವಂದಿಸುತ್ತಾ ಈ ವರದಿಗೆ ಮಂಗಳವನ್ನು ಹಾಡುತ್ತೇವೆ.

**ಹರಿಪ್ರಸಾದ್ ಶೆಟ್ಟಿ**. ಸಂಚಾಲಕರು,
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

**ರಮೇಶ್ ಜಿ. ಶೆಟ್ಟಿ**. ಚೇರ್‌ಪರ್ಸನ್,
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ



# *Congratulations*

**Dr. Karunakar Rai**, Professor, NMIT, Bangalore has been nominated as the member of Executive Council, VTU. Bangalore Bunts Sangha congratulates and wishes him all the best.

# ಸಾಂಸ್ಕೃತಿಕ ಸಮಿತಿ



ಬಂಟರ ಸಂಘ ಬೆಂಗಳೂರು ಸಾಂಸ್ಕೃತಿಕ ಸಮಿತಿಯ ವತಿಯಿಂದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ 2022–23ರ ಸಾಂಸ್ಕೃತಿಕ ಸ್ಪರ್ಧೆಯು ದಿನಾಂಕ 11.12.2022ರ ಭಾನುವಾರ ಬೆಳಿಗ್ಗೆ 10 ಘಂಟೆಗೆ ವಿದ್ಯುಕ್ತವಾಗಿ ಸಂಘದ ಅಧ್ಯಕ್ಷರಾದ ಶ್ರೀ ಎಂ. ಮುರಲೀಧರ ಹೆಗ್ಡೆ ಹಾಗೂ ಉಪಾಧ್ಯಕ್ಷೆ ಶ್ರೀಮತಿ ಗೀತಾಂಜಲಿ ಡಿ. ಅಜಿಲರವರು, ಮಾಜಿ ಕಾರ್ಯದರ್ಶಿಗಳಾದ ಶ್ರೀ ಮಧುಕರ ಎಂ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರ ಜೊತೆಗೆ ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಹಾಗೂ ಸಂಚಾಲಕರು ಚಾಲನೆ ನೀಡಿದರು. ವಿವಿಧ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಯಿತು. ಇನ್ನಷ್ಟು ಸ್ಪರ್ಧೆಗಳು ದಿನಾಂಕ 14.01.2023 ಹಾಗೂ 15.01.2023ರಂದು ನಡೆಯಲಿದೆ.

**ಮಹೇಶ್ ಶೆಟ್ಟಿ**
ಸಂಚಾಲಕರು, ಸಾಂಸ್ಕೃತಿಕ ಸಮಿತಿ

**ಜಯಶ್ರೀ ಸಿ. ರೈ**
ಚೇರ್‌ಪರ್ಸನ್, ಸಾಂಸ್ಕೃತಿಕ ಸಮಿತಿ



# *Congratulations*

**Shubhang Hegde** from Brahmavara Tenkumane has been selected for BCCI-Ranji Trophy 2022-23 from Karnataka. He has represented ZCA under 16, NCA South Zone under 19, India Yellow under 19, India B-under 19. He is the grandson of Handadi Tenkumane Sri Monappa Shetty and Son of Sri Samarth Hegde. Bangalore Bunts Sangha wishes him all the best.

# ಅಭಿನಂದನೆಗಳು



ರೈನ್ ಬೋ ಬುಡಕಾನ್ ಕರಾಟೆ ಅಕಾಡೆಮಿ ಯಡ್ತರೆ ಬೈಂದೂರು ಇಲ್ಲಿ ನಡೆದ 9ನೇ ರೈನ್ ಬೋ ಕಪ್ 22–23ರ ಕಪ್ ಕರಾಟೆ ಸ್ಪರ್ಧೆಯಲ್ಲಿ ಕಟ ಮತ್ತು ಕುಮಿಟೆ ಎರಡು ವಿಭಾಗಗಳಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಎರಡು ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದು 5ನೆ ಯ ಬಾರಿ ರಾಷ್ಟ್ರ ಮಟ್ಟದಲ್ಲಿ ನಡೆದ ಕರಾಟೆ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆಯುವಲ್ಲಿ ಹಾವಂಜೆ ಗ್ರಾಮದ ಕೀಳಂಜೆಯ **ರಿಯಾ ಜಿ. ಶೆಟ್ಟಿ** ಯಶಸ್ವಿಯಾಗಿದ್ದಾರೆ. ಉಡುಪಿಯ ವಳಕಾಡು ಶಾಲೆಯ ಎಂಟನೆ ತರಗತಿಯ ವಿದ್ಯಾರ್ಥಿನಿಯಾಗಿದ್ದು ಹಾವಂಜೆಯ ಛಾಯಾಗ್ರಾಹಕ ಶ್ರೀ ಗಣೇಶ್ ಶೆಟ್ಟಿ ಕೀಳಂಜೆ ಹಾಗೂ ಶ್ರೀಮತಿ ಜಯಲಕ್ಷ್ಮೀ ಜಿ. ಶೆಟ್ಟಿಯವರ ಪುತ್ರಿಯಾಗಿದ್ದು, ಪರ್ಕಳ ಕರಾಟೆ ಪಟು ಶ್ರೀ ಪ್ರವೀಣ್‌ರವರ ಶಿಷ್ಯೆಯಾಗಿದ್ದು, ಪರ್ಕಳದ ಪಿಕೆಸಿ ತಂಡದ ಸದಸ್ಯೆಯಾಗಿದ್ದಾರೆ. ಇವರಿಗೆ ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಬಂಟರ ಸಂಘ ಬೆಂಗಳೂರು

## ಕ್ರೀಡಾ ವಿಭಾಗ

## ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ - 2022-23

**ಆತ್ಮೀಯ ಸದಸ್ಯರೇ,**

2022–23ನೇ ಸಾಲಿನ 'ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾಕೂಟ'ಕ್ಕೆ ತಮ್ಮೆಲ್ಲರನ್ನೂ ಆತ್ಮೀಯವಾಗಿ ಆಹ್ವಾನಿಸುತ್ತಿದ್ದೇವೆ. ಸದಸ್ಯರೆಲ್ಲರೂ ಕ್ರೀಡಾ ಮನೋಭಾವದಿಂದ ತಮ್ಮ ಕುಟುಂಬ ಸದಸ್ಯರೊಂದಿಗೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕ್ರೀಡಾಕೂಟವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸುತ್ತಿದ್ದೇವೆ.

### ಕ್ರೀಡಾಕೂಟದ ವಿವರ

| | | | |
|---|---|---|---|
| ಜನವರಿ 22, ಭಾನುವಾರ | ಶಟಲ್ ಬ್ಯಾಡ್ಮಿಂಟನ್ | ಬೆಳಿಗ್ಗೆ 8.30ಕ್ಕೆ | ಸಿಲಿಕಾನ್ ಅರೈಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ |

ಬೆಂಗಳೂರು ಬಂಟರ ಸಂಘದ 2022–23ನೇ ಸಾಲಿನ ಎಲ್ಲಾ ವಾರ್ಷಿಕ ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಇಚ್ಛಿಸುವವರು ಕಡ್ಡಾಯವಾಗಿ ಸಂಘದ ಸದಸ್ಯರಾಗಿದ್ದು ಸಮಾಜ ಬಾಂಧವರೆಲ್ಲರೂ ಸಹಕರಿಸಬೇಕಾಗಿ ವಿನಂತಿ.

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
ಮೊ : 9945685277

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
ಮೊ : 9945233387

### ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಸಮಿತಿಯ ಈ ಕೆಳಕಂಡ ಸದಸ್ಯರನ್ನು ಸಂಪರ್ಕಿಸಬಹುದು.

| | | | | | |
|---|---|---|---|---|---|
| ಅಖಿಲಾ ಶೆಟ್ಟಿ | 8746924286 | ಅಶ್ವಿನಿ ಶೆಟ್ಟಿ | 7795199583 | ದೀಕ್ಷಾ ಶೆಟ್ಟಿ | 7022089750 |
| ಹರೀಶ್ ಶೆಟ್ಟಿ | 9900133200 | ಕುಶಲ್ ಶೆಟ್ಟಿ | 9448018245 | ನವೀನ್ ಶೆಟ್ಟಿ | 9844226700 |
| ಪ್ರವೀಣ್ ಶೆಟ್ಟಿ | 9880546073 | ಪ್ರೇಮಾನಂದ ಶೆಟ್ಟಿ | 8123035590 | ರಾಜೇಶ್ ಶೆಟ್ಟಿ | 9880389197 |
| ರಾಮಕೃಷ್ಣ ಶೆಟ್ಟಿ | 9980225041 | ರತನ್ ಶೆಟ್ಟಿ | 9880882852 | ಸಂತೋಷ್ ಶೆಟ್ಟಿ ಬಿ. | 9663379394 |
| ಸಂತೋಷ್ ಶೆಟ್ಟಿ | 9880866754 | ಮಹೇಂದ್ರ ಶೆಟ್ಟಿ | 7019321009 | ಸುದರ್ಶನ್ ರೈ | 9902899123 |
| ಸುಕೇಶ್ ಶೆಟ್ಟಿ | 9845953035 | ಸುಕುಮಾರ್ ಶೆಟ್ಟಿ | 9686199225 | ಸುನೀಲ್ ಶೆಟ್ಟಿ | 7829294343 |
| ಉತ್ತಮ್ ಶೆಟ್ಟಿ | 9845188727 | ಯಶವಂತ್ ರೈ | 8792223222 | | |

# ಶಟಲ್ ಬ್ಯಾಡ್ಮಿಂಟನ್

| | |
|---|---|
| ಸ್ಥಳ | : ಸಿಲಿಕಾನ್ ಅರ‍್ಯೆಸ್ ಬ್ಯಾಡ್ಮಿಂಟನ್ ಅಕಾಡೆಮಿ, ಅಂಜನಾಪುರ, ಬೆಂಗಳೂರು–560062 |
| ದಿನಾಂಕ | : 22.01.2023ನೇ ಭಾನುವಾರ, ಬೆಳಿಗ್ಗೆ 8.30ಕ್ಕೆ |
| ಪ್ರವೇಶಶುಲ್ಕ | : ರೂ. 200/– ಸಿಂಗಲ್ಸ್ |
| | ರೂ. 300/– ಡಬಲ್ಸ್ |

ಹೆಸರು ನೊಂದಾಯಿಸಲು ಕೊನೆಯ ದಿನಾಂಕ: 18.01.2023 ನೇ ಬುಧವಾರ ಸಂಜೆ 5.30ಕ್ಕೆ

**ವಯೋಮಿತಿ**

| | |
|---|---|
| 15 ವರ್ಷದ ಒಳಗಿನವರಿಗೆ | : ಸಿಂಗಲ್ಸ್ / ಡಬಲ್ಸ್ |
| 15–32 ವರ್ಷ ಒಳಗಿನವರಿಗೆ | : ಸಿಂಗಲ್ಸ್ / ಡಬಲ್ಸ್ |
| 32–50 ವರ್ಷ ಒಳಗಿನವರಿಗೆ | : ಸಿಂಗಲ್ಸ್ / ಡಬಲ್ಸ್ |
| 50 ವರ್ಷ ಮೇಲ್ಪಟ್ಟು | : ಸಿಂಗಲ್ಸ್ / ಡಬಲ್ಸ್ |
| ಮಿಕ್ಸ್‌ಡ್‌ಡಬಲ್ಸ್ | : ಎಲ್ಲಾ ವಯೋಮಿತಿಯವರಿಗೂ ಮುಕ್ತ |

(Open for all age group)

**ಸೂಚನೆ :**

1. ಎಲ್ಲಾ ವಯೋಮಿತಿಯ ಪುರುಷ ಹಾಗೂ ಮಹಿಳೆಯರಿಗೆ ಪ್ರತ್ಯೇಕ ಸ್ಪರ್ಧೆ.
2. ಪ್ರತಿ ವಯೋಮಿತಿಯಲ್ಲೂ ಕನಿಷ್ಠ 4 ಸ್ಪರ್ಧಿ / ತಂಡಗಳ ಪ್ರವೇಶ ಇರಲೇಬೇಕು.
3. ಪ್ರತಿಯೊಬ್ಬ ಸ್ಪರ್ಧಿಗಳು ತಮ್ಮ ವಯೋಮಿತಿಗೆ ಅನುಗುಣವಾಗಿ ಭಾಗವಹಿಸಬೇಕು/ಅಗತ್ಯವಿದ್ದಲ್ಲಿ ಜನನ ದಿನಾಂಕ ಪ್ರತಿಯನ್ನು ತೋರಿಸತಕ್ಕದ್ದು.
4. ಕಡ್ಡಾಯವಾಗಿ ಸ್ಥಳದಲ್ಲಿ ಯಾವುದೇ ಪ್ರವೇಶವನ್ನು ಸ್ವೀಕರಿಸಲಾಗುವುದಿಲ್ಲ. (No Spot Entry for both Gents and Ladies)
5. ಹೆಸರು ನಮೂದಿಸುವಾಗ ಕಡ್ಡಾಯವಾಗಿ ಸದಸ್ಯತ್ವ ಸಂಖ್ಯೆಯನ್ನು ಕೊಡತಕ್ಕದ್ದು.
6. ಡಬಲ್ಸ್ & ಮಿಕ್ಸ್‌ಡ್ ಡಬಲ್ಸ್ ಸ್ಪರ್ಧೆಗೆ ಸಂಪೂರ್ಣ ತಂಡದ ವಿವರವನ್ನು ನಿಗದಿಪಡಿಸಿದ ದಿನಾಂಕದೊಳಗೆ ಕೊಡಬೇಕು.

**ಪಂದ್ಯಾವಳಿಯ ನಿಯಮಾವಳಿಗಳನ್ನು ವೇಳಾಪಟ್ಟಿ ದಿನದಂದು ನೀಡಲಾಗುವುದು.**

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ನಿತ್ಯರಂಜನ್ ಹೆಗ್ಡೆ**
ಸಂಚಾಲಕರು, ಕ್ರೀಡಾ ಸಮಿತಿ
**ಮೊ : 99456 85277**

**ಕಿರಣ್ ಕುಮಾರ್ ಶೆಟ್ಟಿ ಎಂ.**
ಚೇರ್‌ಪರ್ಸನ್, ಕ್ರೀಡಾ ಸಮಿತಿ
**ಮೊ : 99452 33387**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಕ್ರೀಡಾ ಸಮಿತಿ ಸದಸ್ಯರು**

# ಸೇವಾಚೇತನ–2022






ಸಮಾಜ ಸೇವಾ ಸಮಿತಿ ಮತ್ತು ವೈದ್ಯಕೀಯ ವಿಭಾಗದಿಂದ ಜಂಟಿಯಾಗಿ ದಿನಾಂಕ 03/12/2022, ಶನಿವಾರದಂದು ಬಂಟರ ಸಂಘದ ಆವರಣದಲ್ಲಿ, ಬೃಹತ್ ಉಚಿತ ರಕ್ತದಾನ ಮತ್ತು ಆರೋಗ್ಯ ಶಿಬಿರವನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಮಾಜ ಸೇವಾ ಸಮಿತಿ ವತಿಯಿಂದ ರಾಷ್ಟ್ರೋತ್ಥಾನ ರಕ್ತ ಕೇಂದ್ರದ ಸಹಯೋಗದೊಂದಿಗೆ ಬೃಹತ್ ರಕ್ತದಾನ ಶಿಬಿರ ಹಾಗೂ ಜನಸೇವಕ ಸಹಯೋಗದೊಂದಿಗೆ ಸರಕಾರದ ವಿವಿಧ ಯೋಜನೆಗಳನ್ನು ಜನರಿಗೆ ಕೈಗೆಟುಕುವ ದರದಲ್ಲಿ ನೀಡಲಾಯಿತು ಹಾಗೂ ಆಧಾರ್ ಮತ್ತು ಚುನಾವಣಾ ಗುರುತಿನ ಚೀಟಿಯ ನೋಂದಣಿ ಮತ್ತು ತಿದ್ದುಪಡಿಯನ್ನು ಮಾಡಲಾಯಿತು.

ಸೇವಾಚೇತನ – 2022, ಬೃಹತ್ ಉಚಿತ ಆರೋಗ್ಯ ಮತ್ತು ರಕ್ತದಾನ ಶಿಬಿರವನ್ನು ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶ್ರೀ ಕೆ. ಉಮೇಶ್ ಶೆಟ್ಟಿ, ನಿಕಟಪೂರ್ವ ಬಿ.ಬಿ.ಎಂ.ಪಿ. ಸದಸ್ಯರು ಹಾಗೂ ಸಂಘದ ಆಡಳಿತ ಮಂಡಳಿಯ ಸದಸ್ಯರು ದೀಪ ಪ್ರಜ್ವಲಿಸುವ ಮುಖಾಂತರ ಉದ್ಘಾಟಿಸಲಾಯಿತು.

ನೆತ್ತರ ನೆರವು – ರಕ್ತದಾನ ಶಿಬಿರವನ್ನು ಮೊದಲಿಗೆ ರಕ್ತದಾನ ಮಾಡಿದ ಸಮಾಜ ಸೇವಾ ಸಮಿತಿಯ ಸದಸ್ಯರಾದ ಪ್ರತ್ಯಕ್ಷ್ ಶೆಟ್ಟಿಯವರ ರಕ್ತವನ್ನು ರಾಷ್ಟ್ರೋತ್ಥಾನ ರಕ್ತ ಕೇಂದ್ರಕ್ಕೆ ಹಸ್ತಾಂತರಿಸುವ ಮೂಲಕ ಚಾಲನೆ ನೀಡಲಾಯಿತು. ನೆತ್ತರ ನೆರವು ಕಾರ್ಯಕ್ರಮದಲ್ಲಿ **ದಾಖಲೆಯ 154 ಯುನಿಟ್ ರಕ್ತ** ಸಂಗ್ರಹಿಸಲಾಯಿತು. ಜನಸೇವಕ ಸಹಯೋಗದೊಂದಿಗೆ ನಡೆದ ಸರಕಾರಿ ಸೌಲಭ್ಯಗಳನ್ನು ಕೈಗೆಟುಕುವ ದರದಲ್ಲಿ ಜನರು ಈ ಕೆಳಗಿನ ಸೌಲಭ್ಯಗಳ ಪ್ರಯೋಜನವನ್ನು ಪಡೆದರು.

- 76 ಜನರು - ಹಿರಿಯ ನಾಗರಿಕರ ಗುರುತಿನಚೀಟಿ
- 84 ಜನರು - ಆಯುಷ್ಮಾನ್ ಭಾರತ್ ಕಾರ್ಡ್
- 230 ಜನರು - ಆಧಾರ್ ನೋಂದಣಿ ಹಾಗೂ ತಿದ್ದುಪಡಿ
- 280 ಜನರು - ಮತದಾರರ ಗುರುತಿನ ಚೀಟಿ (ಸೇರ್ಪಡೆ ಹಾಗೂ ತಿದ್ದುಪಡಿ)

ಕಾರ್ಯಕ್ರಮದ ಯಶಸ್ಸಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣರಾದ ಎಲ್ಲರಿಗೂ ಸಮಾಜ ಸೇವಾ ಸಮಿತಿಯ ಪರವಾಗಿ ಧನ್ಯವಾದಗಳು ಮತ್ತು ಮುಂದೆಯೂ ನಿಮ್ಮೆಲ್ಲರ ಸಹಕಾರವನ್ನು ಬಯಸುತ್ತೇವೆ.

ಈ ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸಂಘದ ಸದಸ್ಯರು ಹಾಗೂ ಸಮಾಜ ಸೇವಾ ಸಮಿತಿ ಸದಸ್ಯರು ಪಾಲ್ಗೊಂಡಿದ್ದರು.

**ಸಬನ್ ಶೆಟ್ಟಿ ಗುಡಿಬೆಟ್ಟು**
ಸಂಚಾಲಕರು, ಸಮಾಜ ಸೇವಾ ಸಮಿತಿ

**ಸುದೀಪ್ ನಾಯಕ್**
ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ

# ಸೇವಾ - ಚೇತನಾ - 2022
# ವೈದ್ಯಕೀಯ ಮತ್ತು ವಿಮೆ ವಿಭಾಗ

ದಿನಾಂಕ 03.12.2022 ಶನಿವಾರ ಬಂಟರ ಸಂಘದ ಇತಿಹಾಸದಲ್ಲೇ 'ಸೇವಾ-ಚೇತನ-2022' ಎಂಬ ಅನ್ವರ್ಥ ನಾಮ ನಿಜವಾಗಿಯೂ ಅನ್ವರ್ಥವಾಯಿತು. ಮುಂಜಾನೆ 7.00 ಘಂಟೆಗೆ ಪ್ರಾರಂಭವಾದ ಸೇವಾ ಜಾಥಾ ಸಾಯಂಕಾಲ 4.00 ಘಂಟೆಯವರೆಗೂ ಅವ್ಯಾಹತವಾಗಿ ನಡೆಯಿತು. ಕಟ್ಟಕಡೆಯ ಸಮಾಜದ ಬಂಧುಗಳಿಗೆ, ಸರಕಾರದ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ವೈದ್ಯಕೀಯ ವಿಭಾಗವು ಸಮಾಜ ಸೇವಾ ಸಮಿತಿಯೊಂದಿಗೆ ಕಾರ್ಯೋನ್ಮುಖವಾಯಿತು. **"ADIPS"** ಯೋಜನೆಯಡಿಯಲ್ಲಿ ಮಾನಸ ಕಾಕ್ಲೀಯರ್ ಇಂಪ್ಲ್ಯಾಂಟ್ ಸಹಯೋಗದಲ್ಲಿ ಪ್ರತೀ ಮಗುವಿನ ಸುಮಾರು 8 ಲಕ್ಷ ವೆಚ್ಚದಲ್ಲಿ ಒಟ್ಟು 6 ಮಕ್ಕಳ ಕಾಕ್ಲೀಯರ್ ಇಂಪ್ಲ್ಯಾಂಟ್ ಸರ್ಜರಿ ಏರ್ಪಡಿಸುವಲ್ಲಿ ಯಶಸ್ವಿಯಾಯಿತು ಮತ್ತು ಬಂಟರ ಸಂಘವು ಸಮಾಜಮುಖಿ ಎನ್ನುವುದನ್ನು ಇನ್ನಷ್ಟು ಧೃಡಪಡಿಸಿತು.

ಬಂಟರ ಸಂಘವು ಆಯೋಜಿಸಿದ ಉಚಿತ ಆರೋಗ್ಯ ತಪಾಸಣಾ ಶಿಬಿರವು ಸಾಮಾನ್ಯವಾಗಿ ನಡೆಯುವ ಶಿಬಿರದಂತಿರದೆ, ಇತ್ತೀಚಿನ ಮಾರಣಾಂತಿಕ ರೋಗಗಳಾದ ಹೃದಯ ಮತ್ತು ಕ್ಯಾನ್ಸರ್‌ಗೆ ಸಂಬಂಧಪಟ್ಟ ತಪಾಸಣೆಯತ್ತ ಹೆಚ್ಚಿನ ಗಮನವನ್ನು ಹರಿಸಿತು. ನಗರದ ಸುಮಾರು 13 ಕ್ಕೂ ಮಿಕ್ಕಿ ಪ್ರತಿಷ್ಠಿತ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಸಹಯೋಗದೊಂದಿಗೆ ಆಧುನಿಕ ಯಂತ್ರಗಳ ಮುಖಾಂತರ 800ಕ್ಕೂ ಮಿಕ್ಕಿದ ಶಿಬಿರಾರ್ಥಿಗಳನ್ನು ಪರೀಕ್ಷಿಸಿ, ವೈದ್ಯಾಧಿಕಾರಿಗಳು ಸಲಹೆ-ಸೂಚನೆಗಳನ್ನು ನೀಡಿದರು.




**"Kidwai Institute of Oncology"** ಇವರ ಸಹಯೋಗದೊಂದಿಗೆ 65ಕ್ಕೂ ಮಿಕ್ಕಿ ಶಿಬಿರಾರ್ಥಿಗಳಿಗೆ ಕ್ಯಾನ್ಸರ್ ಪತ್ತೆ ತಪಾಸಣೆ ಏರ್ಪಡಿಸಲಾಗಿದ್ದು, ಫಲಿತಾಂಶದ ನಿರೀಕ್ಷಣೆಯಲ್ಲಿದೆ. ಅರ್ಬುದ ಖಾಯಿಲೆಯ ಬಗ್ಗೆ ಹೆಚ್ಚಿನ ಅರಿವನ್ನು ಮೂಡಿಸಲು ಮುಂದಿನ ದಿನಗಳಲ್ಲಿ ಬಂಟರ ಸಂಘವು **"Kidwai Institute of Oncology"**ಯೊಂದಿಗೆ ಕೈಜೋಡಿಸಲು ನಿಶ್ಚಯಿಸಿತು.

ಮೊದಲ ಬಾರಿಗೆ ಸರಕಾರದ ಪ್ರತಿಷ್ಠಿತ ಸಂಸ್ಥೆಯಲ್ಲಿ ಒಂದಾದ ಇನ್ಸ್ಟಿಟ್ಯೂಟ್ ಆಫ್ ನೆಫ್ರೋ ಯೂರಾಲಜಿ ಸಹಭಾಗಿತ್ವದಲ್ಲಿ ಮೂತ್ರ ಪಿಂಡದ ಆರೋಗ್ಯವನ್ನು ಕಾಪಾಡುವ ನಿಟ್ಟಿನಲ್ಲಿ, ಶಿಬಿರಾರ್ಥಿಗಳನ್ನು ಪರೀಕ್ಷಿಸಿ ಸಲಹೆಗಳನ್ನು ನೀಡಲಾಯಿತು.

**"AANVII Hearing Solutions Pri. Ltd."** ಸಂಸ್ಥೆಯ ಮೂಲಕ, ಬಂಟರ ಸಂಘವು ಕಿವುಡುತನ ಹೋಗಲಾಡಿಸುವ ನಿಟ್ಟಿನಲ್ಲಿ ಪ್ರಥಮ ಹೆಜ್ಜೆಯನ್ನು ಇಟ್ಟಿತು. ಸುಮಾರು 150 ಕ್ಕೂ ಹೆಚ್ಚು ಜನರನ್ನು ಕೂಲಂಕುಷವಾಗಿ ಮತ್ತು ವೈಜ್ಞಾನಿಕವಾಗಿ ಪರೀಕ್ಷಿಸಿ, ಶ್ರವಣದೋಷವಿರುವ 52 ಮಂದಿಗೆ 1 ಅಥವಾ 2 ಕೃತಕ ಶ್ರವಣ ಯಂತ್ರವು ಅತ್ಯಗತ್ಯ ಎಂದು ಮನಗಂಡು, ಸುಮಾರು ರೂ.18,000/- ಮುಖಬೆಲೆಯ 86 ಶ್ರವಣ ಯಂತ್ರಗಳನ್ನು ಉಚಿತವಾಗಿ ವಿತರಿಸಲು ನಿಶ್ಚಯಿಸಿತು.

ಇಲ್ಲಿಯವರೆಗೆ ಬಂಟರ ಸಂಘದ ವೈದ್ಯಕೀಯ ನಿಧಿಯಿಂದ 8 ಬಂಟ ಫಲಾನುಭವಿಗಳಿಗೆ ಕೃತಕ ಶ್ರವಣ ಯಂತ್ರಗಳನ್ನು ನೀಡುವ ಬಗ್ಗೆ ಚಿಂತನೆ ನಡೆಸಲಾಗಿದೆ ಹಾಗೂ ಗೌರವಾನ್ವಿತ ಶ್ರೀ ಪ್ರಮೋದ್ ಮಧ್ವರಾಜ್, ಮಾಜಿ ಸಚಿವರು, ಕರ್ನಾಟಕ ಸರಕಾರ ಅವರಿಂದ 10 ಕೃತಕ ಶ್ರವಣ ಯಂತ್ರಗಳನ್ನು ಆಯೋಜಿಸುವಲ್ಲಿ ಯಶಸ್ವಿಯಾಗಿದೆ.

ಕೆಲವೊಂದು ಶ್ರವಣ ದೋಷವಿರುವ ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುಕೂಲವಾಗುವಂತೆ, ನಿಜವಾದ ಅವಶ್ಯಕತೆಗಳ ಮೇರೆಗೆ ಸುಮಾರು 4 ಲಕ್ಷದವರೆಗಿನ ಕೃತಕ ಶ್ರವಣ ಯಂತ್ರಗಳನ್ನು ದಾನಿಗಳ ಮುಖಾಂತರ ಪಡೆದು, ಫಲಾನುಭವಿಗಳಿಗೆ ವಿತರಿಸಲು ಬಂಟರ ಸಂಘ ವೈದ್ಯಕೀಯ ವಿಭಾಗ ಕಾರ್ಯೋನ್ಮುಖವಾಗಿದೆ. ಇನ್ನುಳಿದ ಫಲಾನುಭವಿಗಳಿಗೆ ಹಂತ ಹಂತವಾಗಿ ಉಚಿತ ಶ್ರವಣ ಯಂತ್ರವನ್ನು ವಿತರಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಬಂಟರ ಸಂಘ ವೈದ್ಯಕೀಯ ವಿಭಾಗವು **"Karnataka Marwari Youth Federation"** ನೊಂದಿಗೆ ಕೈಜೋಡಿಸಿ 4 ಫಲಾನುಭವಿಗಳನ್ನು ಗುರುತಿಸಿ, ಉಚಿತವಾಗಿ ಕೃತಕ ಕಾಲುಗಳನ್ನು ಜೋಡಿಸುವಲ್ಲಿ ಗುರುತರ ಹೆಜ್ಜೆಯನ್ನಿಟ್ಟಿತು.

ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆ ಸಹಯೋಗದೊಂದಿಗೆ ತುಂಬಾ ಅತ್ಯಗತ್ಯವಾಗಿರುವ ರಕ್ತ ಗುಂಪು ವರ್ಗೀಕರಣ ಕಾರ್ಯಕ್ರಮದ ಅಡಿಯಲ್ಲಿ ಸುಮಾರು 250 ಕ್ಕೂ ಮಿಕ್ಕಿ ಶಿಬಿರಾರ್ಥಿಗಳ ರಕ್ತ ಗುಂಪುಗಳನ್ನು ವರ್ಗೀಕರಿಸಿ ಫಲಿತಾಂಶವನ್ನು ಸ್ಥಳದಲ್ಲೇ ನೀಡಲಾಯಿತು.

ಫೋರ್ಟಿಸ್ ಆಸ್ಪತ್ರೆ, ಸ್ಪೈನ್ ಕೇರ್ ಆಸ್ಪತ್ರೆ ಮತ್ತು ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆಗಳ ವೈದ್ಯರ ಸೂಚನೆಗಳ ಮೇರೆಗೆ ಶಿಬಿರಾರ್ಥಿಗಳನ್ನು ಇ.ಸಿ.ಜಿ.ಗೆ ಒಳಪಡಿಸಿ ಫಲಿತಾಂಶ ಮತ್ತು ಸಲಹೆಗಳನ್ನು ನೀಡಿದರು.

ಶ್ರೀ ಜ್ಯೋತಿಪ್ರಸಾದ್ ಹೆಗ್ಡೆ ಇವರ ಮಾಲೀಕತ್ವದ ಮೆಡಿಲ್ಯಾಬ್ ಇಂಡಿಯಾ ಪ್ರೈ. ಲಿ. ಬೆಂಗಳೂರು ಇವರ ಸಹಭಾಗಿತ್ವದಲ್ಲಿ ಶಿಬಿರಾರ್ಥಿಗಳಿಗೆ ಉಚಿತವಾಗಿ ಮೂಳೆ ಸಾಂದ್ರತೆ ತಪಾಸಣೆ ಮತ್ತು ಸಲಹೆಗಳನ್ನು ನೀಡಿದರು.

ಬೆಳಿಗ್ಗೆ 8.00 ಘಂಟೆಗೆ ಶ್ರೀ ಕೆ. ಉಮೇಶ್ ಶೆಟ್ಟಿ, ನಿಕಟಪೂರ್ವ ಸದಸ್ಯರು, ಬಿಬಿಎಂಪಿ ಇವರಿಂದ ಉದ್ಘಾಟನೆಗೊಂಡ ಶಿಬಿರವು, ಸಂಜೆ 4.30ರವರೆಗೆ ಅವ್ಯಾಹತವಾಗಿ ನಡೆಯಿತು.

ಸಾಯಂಕಾಲ 4.30 ಕ್ಕೆ ಸದಸ್ಯೆಯರ ಪ್ರಾರ್ಥನೆಯೊಂದಿಗೆ ಸಭಾ ಕಾರ್ಯಕ್ರಮವು ನಿರ್ವಿಘ್ನವಾಗಿ ನಡೆಯಿತು. ಮುಖ್ಯ ಅತಿಥಿಗಳಾದ ಸಂಸದ ಶ್ರೀ ತೇಜಸ್ವಿ ಸೂರ್ಯರವರು ಸಭೆಯನ್ನು ಉದ್ದೇಶಿಸಿ, ಬಂಟರ ಸ್ಥಾನಮಾನಗಳ ಬಗ್ಗೆ ವಿಶ್ಲೇಷಿಸಿದರು. ಇನ್ನೋರ್ವ ಅತಿಥಿಗಳಾದ ಶ್ರೀಯುತ ಪ್ರಮೋದ್ ಮಧ್ವರಾಜ್‌ರವರು ಉಡುಪಿಯಿಂದ ಬೆಂಗಳೂರು ಬಂಟರ ಸಂಘದವರೆಗೆ ಆಗಮಿಸಿ, ಬಂಟರ ಸಂಘ ನಡೆಸುತ್ತಿರುವ ಕಾರ್ಯಗಳನ್ನು ಶ್ಲಾಘಿಸಿದರು. ಬಂಟರ ಸಂಘ ನಡೆಸುವ ಜನಸೇವಾ ಕಾರ್ಯದಲ್ಲಿ ತಾವೂ ಭಾಗಿಯಾಗಲು ಉತ್ಸುಕನಾಗಿದ್ದೇನೆ ಹಾಗೂ ತನ್ನ ತನು–ಮನ–ಧನ ಸಹಾಯ ಯಾವಾಗಲೂ ಇದ್ದೇ ಇರುತ್ತದೆ ಎಂಬ ಭರವಸೆಯನ್ನು ಕೊಟ್ಟರು.



ಇನ್ನೋರ್ವ ಅತಿಥಿಗಳಾದ ನಮ್ಮವರೇ ಆದ, ಇ.ಎಸ್.ಐ.ಸಿ. ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಜೈಪುರ್, ರಾಜಸ್ಥಾನ ಇದರ ಡೀನ್ ಆಗಿರುವ ಡಾ. ನಂದಕಿಶೋರ್ ಆಳ್ವರು, ರಕ್ತದಾನದಿಂದಾಗುವ ಪ್ರಯೋಜನಗಳನ್ನು ಸವಿಸ್ತಾರವಾಗಿ ಮನವರಿಕೆ ಮಾಡಿದರು.

ಸಮಾಜಮುಖಿ ಕಾರ್ಯಕ್ರಮಗಳಿಗೆ ಹೆಸರಾದ ನಿಕಟಪೂರ್ವ ಸಮಾಜ ಸೇವಾ ಸಮಿತಿಯ ಚೇರ್ ಪರ್ಸನ್ ಆಗಿರುವ ಶ್ರೀ ಉಮೇಶ್ ಶೆಟ್ಟಿ ಎಂ. ಬಿ.ಯವರು ಉಚಿತವಾಗಿ ಎರಡು ಗಾಲಿ ಕುರ್ಚಿಗಳನ್ನು ಬೆಂಗಳೂರು ಬಂಟರ ಸಂಘಕ್ಕೆ ನೀಡಿದರು. ಒಂದು ಗಾಲಿ ಕುರ್ಚಿಯನ್ನು ಬಂಟರ ಸಂಘವು ಶ್ರೀ ಉಮೇಶ್ ಶೆಟ್ಟಿ ಎಂ. ಬಿ.ಯವರ ಆಶಯದಂತೆ ಶ್ರೀ ರಂಜಿತ್ ಶೆಟ್ಟಿಯವರ 'ಆರೈಕೆ' ಆಶ್ರಮದ ವಾಸಿಗಳ ಉಪಯೋಗಕ್ಕಾಗಿ ಹಸ್ತಾಂತರಿಸಿದರು.



ಈತನ್ಮಧ್ಯೆ **ಅರೆಹೊಳೆ ಪ್ರತಿಷ್ಠಾನದ "ನಂದಗೋಕುಲ ಕಲಾವಿದರು–ಮಂಗಳೂರು"** ಇವರು ಪ್ರಸ್ತುತ ಪಡಿಸಿದ ವಿವಿಧ ಪ್ರಕಾರದ ನೃತ್ಯಗಳು ಸಭಿಕರನ್ನು ಮಂತ್ರ ಮುಗ್ಧಗೊಳಿಸಿತು.

ನೃತ್ಯಲೋಕದ ಹೊಸ ಆಯಾಮಗಳನ್ನು ಪ್ರದರ್ಶಿಸಿ, ನೃತ್ಯಗಳಲ್ಲಿ ಅಭಿನಯದ ಜೊತೆಗೆ ಅಭಿವ್ಯಕ್ತಿಯೂ ಮುಖ್ಯ ಎಂಬುವುದನ್ನು ಪ್ರಚುರಪಡಿಸಿತು.



ಶಿಬಿರಾರ್ಥಿಗಳಿಗೆ ಬೆಳಗ್ಗಿನ ಉಪಹಾರ, ಮಧ್ಯಾಹ್ನದ ಊಟ ಹಾಗೂ ಸಾಯಂಕಾಲದ ಲಘು ಉಪಹಾರದ ಸದುಪಯೋಗವನ್ನು ಶಿಬಿರಾರ್ಥಿಗಳು ಪಡೆದರು. ಊಟೋಪಚಾರದ ವ್ಯವಸ್ಥೆಗೆ ಪ್ರಾಯೋಜಕತ್ವ ನೀಡಿದ ದಾನಿಗಳಾದ ಈಕಾ ಕೀಸ್ ಸಂಸ್ಥೆಯ ಪಾಲುದಾರರಾದ ಶ್ರೀ ದಿನೇಶ್ ಹೆಗ್ಡೆ, ಶ್ರೀ ಗೋಪಾಲ ಶೆಟ್ಟಿ ಕೊರ್ಗಿ, ಶ್ರೀ ಪ್ರಶೂಲ್ ಶೆಟ್ಟಿ ಮತ್ತು ಶ್ರೀ ಸಿದ್ಧಾರ್ಥ್ ಶೆಟ್ಟಿ ಹಾಗೂ ಡಾ. ಜಗದೀಶ್ ಶೆಟ್ಟಿ, ಉಪಾಧ್ಯಕ್ಷರು, ಬಂಟರ ಸಂಘ ಮತ್ತು ಮೆಡಿಕಲ್ ಡೈರೆಕ್ಟರ್, ಪ್ರೀಮಿಯರ್ ಸಂಜೀವಿನಿ ಆಸ್ಪತ್ರೆ, ಬೆಂಗಳೂರು ಮತ್ತು ನಿಕಟಪೂರ್ವ ಖಜಾಂಚಿಯವರಾದ ಶ್ರೀ ದೀಪಕ್ ಶೆಟ್ಟಿ ಇವರಿಗೆ ಅನಂತಾನಂತ ಧನ್ಯವಾದಗಳು.

ಅತಿಥಿಗಳು, ವೈದ್ಯರು ಮತ್ತು ಸಿಬ್ಬಂದಿಗಳಿಗೆ ವಿಶೇಷ ಭೋಜನ ವ್ಯವಸ್ಥೆಯನ್ನು ನೀಡಿದ ವಿಷ್ಣು ಗ್ರ್ಯಾಂಡ್, ಮೈಸೂರು ಸರ್ಕಲ್ ಹೋಟೇಲ್ ಮಾಲೀಕರಾದ ಶ್ರೀಯುತ ಪ್ರಭಾಕರ್ ಶೆಟ್ಟಿ ಕೈಲಾಡಿ ಮತ್ತು ಸಹೋದರರು ಇವರಿಗೆ ಹೃತ್ಪೂರ್ವಕ ಧನ್ಯವಾದಗಳು.

**ವೈದ್ಯಕೀಯ ವಿಭಾಗದ ಉದಾತ್ತ ಸೇವೆಯಲ್ಲಿ ಕೈ ಜೋಡಿಸಿದ ದಾನಿಗಳ ವಿವರಗಳು :–**

01. ಶ್ರೀ ಪ್ರಮೋದ್ ಮಧ್ವರಾಜ್ – ಮಾಜಿ ಸಚಿವರು, ಕರ್ನಾಟಕ ಸರಕಾರ
02. ಶ್ರೀ ಉಮೇಶ್ ಶೆಟ್ಟಿ ಎಂ. ಬಿ. – ನಿಕಟಪೂರ್ವ ಕಾರ್ಯಕಾರಿ ಸಮಿತಿ ಸದಸ್ಯರು
03. ಆನ್ವಿ ಹಿಯರಿಂಗ್ ಸಲ್ಯೂಶನ್ಸ್ ಸಂಸ್ಥೆ
04. ಶ್ರೀ ಸುಕುಮಾರ್ ಶೆಟ್ಟಿ ಹೆಚ್. – ಹೋಮ್ ಮೆಡಿಕ್ಸ್ ಇಂಡಿಯಾ ಪ್ರೈ. ಲಿ.
05. ಡಾ. ಸುಕೇಶ್ ಶೆಟ್ಟಿ – ಎಸೆನ್ಶಿಯಲ್ ಆಸ್ಪತ್ರೆ
06. ಶ್ರೀ ಸಂತೋಷ್‌ಕುಮಾರ್ ಶೆಟ್ಟಿ – ಮೈತ್ರಿ
07. ಸಿ. ಎ. ಕಿಶೋರ್ ಶೆಟ್ಟಿ – ಕಾರ್ಯಕಾರಿ ಸಮಿತಿ ಸದಸ್ಯರು
08. ಶ್ರೀ ಅಮರನಾಥ್ ಶೆಟ್ಟಿ – ಖಜಾಂಚಿಗಳು – ಬಂಟರ ಸಂಘ ಬೆಂಗಳೂರು
09. ಡಾ. ಸುರೇಂದ್ರ ಶೆಟ್ಟಿ ಕೊಡ್ಲಾಡಿ – ಸ್ಪೈನ್ ಕೇರ್ ಆರ್ಥೋಕೇರ್ ಆಸ್ಪತ್ರೆ
10. ಶ್ರೀ ಪ್ರಮೋದ್‌ಚಂದ್ರ ಭಂಡಾರಿ – ಮಾಜಿ ಖಜಾಂಚಿಗಳು – ಬಂಟರ ಸಂಘ ಬೆಂಗಳೂರು
11. ಶ್ರೀ ಮಧುಕರ ಎಂ. ಶೆಟ್ಟಿ – ನಿಕಟಪೂರ್ವ ಕಾರ್ಯದರ್ಶಿಗಳು– ಬಂಟರ ಸಂಘ ಬೆಂಗಳೂರು
12. ಶ್ರೀ ಶಾಂತಾರಾಮ್ ಶೆಟ್ಟಿ – ಎನ್ ರ್‍ಯಾಕ್ ಆಕ್ಸೆಸರೀಸ್ ಪ್ರೈ. ಲಿ.

**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು

**ಕೆ. ನಿರಂಜನ್ ಶೆಟ್ಟಿ**
ಚೇರ್‌ಪರ್ಸನ್

**ವೈದ್ಯಕೀಯ ಮತ್ತು ವಿಮಾ ವಿಭಾಗ**



# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 23ನೇ ವಾರ್ಷಿಕೋತ್ಸವದ ಕರೆಯೋಲೆ

**ಆಸ್ತಿಕ ಬಂಧುಗಳೇ,**

ಸಂಘದ ಸಂಕೀರ್ಣದಲ್ಲಿರುವ "ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ"ದ 23ನೇ ವಾರ್ಷಿಕೋತ್ಸವವನ್ನು 2023ನೇ ಜನವರಿ, 19ನೇ ತಾರೀಕು ಗುರುವಾರದಂದು ಅದ್ದೂರಿಯಾಗಿ ವಿಶೇಷ ಪೂಜಾಲಂಕಾರದೊಂದಿಗೆ ನೆರವೇರಿಸಲು ನಿಶ್ಚಯಿಸಿರುತ್ತೇವೆ.

## ಕಾರ್ಯಕ್ರಮಗಳ ವಿವರ

| | | |
|---|---|---|
| ಬೆಳಿಗ್ಗೆ 8.00 ಗಂಟೆಗೆ | : | ಅಭಿಷೇಕ ಮತ್ತು ಗಣಹೋಮ |
| ಬೆಳಿಗ್ಗೆ 10.00 ಗಂಟೆಗೆ | : | ಭಜನಾ ಕಾರ್ಯಕ್ರಮ |
| ಮಧ್ಯಾಹ್ನ 12.00 ಗಂಟೆಗೆ | : | ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ |
| ಮಧ್ಯಾಹ್ನ 1.00 ಗಂಟೆಗೆ | : | ಅನ್ನಸಂತರ್ಪಣೆ |

ಸಂಘದ ಸಂಕೀರ್ಣದಲ್ಲಿ ನಡೆಯುವ ಪೂಜಾ ಕಾರ್ಯಕ್ರಮಕ್ಕೆ ಭಕ್ತಾದಿಗಳಾದ ತಾವು ಕುಟುಂಬ ಸಮೇತರಾಗಿ ಆಗಮಿಸಿ ಶ್ರೀ ಮಹಾಗಣಪತಿಯ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿಸುತ್ತಾ, ತಮಗೆ ಆದರದ ಸ್ವಾಗತವನ್ನು ಕೋರುವ,

**ಆನಂದರಾಮ ಶೆಟ್ಟಿ ಬಿ.**
ಗೌರವ ಕಾರ್ಯದರ್ಶಿ

**ಎಂ. ಮುರಲೀಧರ ಹೆಗ್ಡೆ**
ಅಧ್ಯಕ್ಷರು

**ಜಯಕರ ಶೆಟ್ಟಿ**
ಸಂಚಾಲಕರು, ಪ್ರಾರ್ಥನಾ ಮಂದಿರ ಸಮಿತಿ
**99008 16484**

**ಕೀರ್ತನ್ ಶೆಟ್ಟಿ**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ
**99861 70124**

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಪ್ರಾರ್ಥನಾ ಮಂದಿರದ ಸಮಿತಿ ಸದಸ್ಯರು.**

ವಿ.ಸೂ. ಅಭಿಷೇಕ ಮಾಡಿಸುವ ಭಕ್ತಾದಿಗಳು ರೂ. 101/–ನ್ನು, ಗಣಹೋಮ ಮಾಡಿಸುವವರು ರೂ, 151/–ನ್ನು ಮತ್ತು ಶಾಶ್ವತ ಪೂಜೆ ಮಾಡಿಸುವವರು ರೂ. 1251/–ನ್ನು ಸಂಘದ ಕಛೇರಿಯಲ್ಲಿ ಪಾವತಿಸಿ ರಸೀದಿ ಪಡೆಯ ಬೇಕಾಗಿ ವಿನಂತಿ.

## ಅಭಿನಂದನೆಗಳು



**ಶ್ರೀ ಗೌರವ್ ಜಗನ್ನಾಥ ಶೆಟ್ಟಿ** ಯವರು ಮುಂಬಯಿಯಲ್ಲಿ ನಡೆದ ಐ.ಪಿ.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದಾರೆ. ಬಂಟರ ಸಂಘ ಮುಂಬಯಿ ಸಂಚಾಲಿತ ಎಸ್. ಎಂ. ಶೆಟ್ಟಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಇವರು ಉನ್ನತ ವಿದ್ಯಾಭ್ಯಾಸವನ್ನು ನೆರೂಲ್‌ನ ಡಿ. ವೈ. ಪಾಟೀಲ್ ವಿದ್ಯಾಸಂಕುಲದಲ್ಲಿ ಪೂರೈಸಿದ್ದಾರೆ. ಇವರು ಮೂಲತಃ ಸಿದ್ಧಕಟ್ಟೆ ಕೊನರೆಗುತ್ತು ಶ್ರೀ. ಜಗನ್ನಾಥ ಸೀತಾರಾಮ ಶೆಟ್ಟಿ ಹಾಗೂ ಎರ್ಮಾಳು ಲೋಕನಾಡುಮನೆ ಶ್ರೀಮತಿ ಆಶಾ ಜೆ. ಶೆಟ್ಟಿಯವರ ಪುತ್ರರಾಗಿದ್ದಾರೆ. ಬೆಂಗಳೂರು ಬಂಟರ ಸಂಘದ ಪರವಾಗಿ ಇವರಿಗೆ ಅಭಿನಂದನೆಗಳು.

# ಯುವ ವಿಭಾಗ – ಹೊಸ ವರ್ಷ ಆಚರಣೆ



ದಿನಾಂಕ 31.12.2022ರಂದು ಶನಿವಾರ ರಾತ್ರಿ 8.30 ರಿಂದ ಬಂಟರ ಸಂಘ ಬೆಂಗಳೂರು ಯುವ ವಿಭಾಗದಿಂದ ಸಂಘದ ಆವರಣದಲ್ಲಿ ಹೊಸ ವರ್ಷವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಮನೋರಂಜನೆಗಾಗಿ ವಿವಿಧ ಬಗೆಯ ಆಟೋಟ ಸ್ಪರ್ಧೆಗಳು, ಸಮೂಹ ನೃತ್ಯ, ಡಿಜೆ ಹಾಗೂ ಊಟೋಪಚಾರದ ವ್ಯವಸ್ಥೆಗಳನ್ನು ಏರ್ಪಡಿಸಿದ್ದು ನಮ್ಮ ಸಂಘದ ಸದಸ್ಯರು ನಮ್ಮ ಸಂಘದ ನೆಲದಲ್ಲಿ ಹೊಸ ವರ್ಷವನ್ನು ಬರ ಮಾಡಿಕೊಂಡರು ಹಾಗೂ ಸಂಘದ ಸದಸ್ಯರು ಪರಸ್ಪರ ಬೆರೆತು ಸಂತೋಷಪಟ್ಟರು.

ಸಂಘದ ಅಧ್ಯಕ್ಷರಾದ ಶ್ರೀ ಮುರಲೀಧರ ಹೆಗ್ಡೆ ಎಂ., ಉಪಾಧ್ಯಕ್ಷರಾದ ಡಾ. ಜಗದೀಶ್ ವಿ. ಶೆಟ್ಟಿ, ಗೌರವ ಕಾರ್ಯದರ್ಶಿಯವರಾದ ಶ್ರೀ ಆನಂದರಾಮ ಶೆಟ್ಟಿ ಬಿ., ಖಜಾಂಚಿಯವರಾದ ಶ್ರೀ ಅಮರನಾಥ ಶೆಟ್ಟಿಯವರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಕುಟುಂಬ ಸಮೇತರಾಗಿ ಹೊಸ ವರ್ಷ ಆಚರಣೆಯಲ್ಲಿ ಪಾಲ್ಗೊಂಡರು.

ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು, ಮಾಜಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಆಗಮಿಸಿ ಕಾರ್ಯಕ್ರಮಕ್ಕೆ ಮೆರುಗು ನೀಡಿದರು.

ಹೊಸ ವರ್ಷ ಆಚರಣೆಗೆ ಬೆಂಗಳೂರು ಮಹಾನಗರ ಪಾಲಿಕೆಯ ಮಾಜಿ ಸದಸ್ಯರಾದ ಶ್ರೀ ಕೆ. ಉಮೇಶ್ ಶೆಟ್ಟಿಯವರು ಕುಟುಂಬ ಸಮೇತರಾಗಿ ಆಗಮಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶುಭಹಾರೈಸಿದರು.

**ಹೊಸ ವರ್ಷ ಕಾರ್ಯಕ್ರಮಕ್ಕೆ ವಿಶೇಷ ಪ್ರೋತ್ಸಾಹವನ್ನು ನೀಡಿದವರು;**

| | |
|---|---|
| ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ | ಶಂಕರನಾರಾಯಣ ಕನ್‌ಸ್ಟ್ರಕ್ಷನ್ಸ್ ಪ್ರೈ.ಲಿ. |
| ಶ್ರೀ ಎಂ. ಮುರಲೀಧರ ಹೆಗ್ಡೆ | ಡಾ. ಜಗದೀಶ್ ವಿ. ಶೆಟ್ಟಿ |
| ಶ್ರೀ ಆನಂದರಾಮ್ ಶೆಟ್ಟಿ ಬಿ. | ಶ್ರೀ ಅಮರನಾಥ ಶೆಟ್ಟಿ |
| ಶ್ರೀ ಸಂತೋಷ್ ಶೆಟ್ಟಿ ಮತ್ತು ಶ್ರೀ ಶಾಂತಾರಾಮ್ ಶೆಟ್ಟಿ ಎನ್ ರ್‍ಯಾಕ್ ಆಕ್ಸಸರೀಸ್ ಪ್ರೈ.ಲಿ. | ಶ್ರೀ ಭವಾನಿ ಶಂಕರ್ ಶೆಟ್ಟಿ |
| ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಮತ್ತು ಶ್ರೀ ರವೀಂದ್ರನಾಥ ಮಾರ್ಲ ಶೀಲಾ ಇಕ್ವಿಪ್‌ಮೆಂಟ್ಸ್ ಪ್ರೈ.ಲಿ. | ಶ್ರೀ ಪ್ರೀತೇಶ್ ಶೆಟ್ಟಿ, ಅವಿಷ್ಕಾರ್ ಸರ್ಜಿಕಲ್ |
| ಶ್ರೀ ಜಗನ್ನಾಥ ಶೆಟ್ಟಿ | ಶ್ರೀ ದೀಲಿಪ್ ಶೆಟ್ಟಿ, ಐಕ್ಲಸ್ಟರ್ ಟೆಕ್ನಾಲೊಜಿಸ್ |
| ಶ್ರೀ ಸತೀಶ್ ಶೆಟ್ಟಿ, ರೂಪೇಬಾಸ್ ಫೈನಾಶಿಯಲ್ ಸರ್ವಿಸನ್ ಪ್ರೈ.ಲಿ, | ಶ್ರೀ ವಿನಯ್ ಕುಮಾರ್ ಶೆಟ್ಟಿ ಚೈತನ್ಯ ಫೈನಾನ್ಸ್ |
| ಶ್ರೀ ಹೆಚ್. ಎಸ್. ರಾಘವೇಂದ್ರ ಶೆಟ್ಟಿ, ಸಮಾಜ ಸೇವಕರು | ಶ್ರೀ ಪ್ರದೀಪ್ ಕುಮಾರ್ |
| ಶ್ರೀ ರಾಜೇಶ್ ಶೆಟ್ಟಿ | ಶ್ರೀ ಪ್ರಸಾದ್ ಶೆಟ್ಟಿ |
| ಶ್ರೀ ಸುಕೇಶ್ ಶೆಟ್ಟಿ | ಸಿಎ. ಚಂದ್ರಶೇಖರ ಶೆಟ್ಟಿ |
| ಸಿಎ. ಮನೋಹರ್ ಶೆಟ್ಟಿ | ಸಿಎ. ದೀಪಕ್ ಶೆಟ್ಟಿ |
| ಸಿಎ. ಸುನೀಲ್ ಭಂಡಾರಿ | ಸಿಎ. ಚಂದನ್ ಕುಮಾರ್ ಹೆಗ್ಡೆ |
| ಸಿಎ. ಆಕಾಶ್ ಹೆಗ್ಡೆ | ಸಿಎ. ವಿಜಯ್ ಶೆಟ್ಟಿ |
| ಸಿಎ. ರಾಘವೇಂದ್ರ ಶೆಟ್ಟಿ, ಕಟ್ಕೇರೆ | ಶ್ರೀ ಸಂದೀಪ್ ಶೆಟ್ಟಿ |
| ಶ್ರೀ ಸತೀಶ್ ಶೆಟ್ಟಿ, ಕರಾವಳಿ | ಶ್ರೀ ಆರ್. ಉಪೇಂದ್ರ ಶೆಟ್ಟಿ |

ಶ್ರೀ ದೀಪಕ್ ಶೆಟ್ಟಿ
ಶ್ರೀ ರಮಿತ್ ಬಿ. ಶೆಟ್ಟಿ
ಶ್ರೀ ಉಮೇಶ್ ಶೆಟ್ಟಿ ಎಂ.ಬಿ.
ಶ್ರೀ ಸುದೀಪ್ ನಾಯಕ್
ಶ್ರೀ ಪ್ರವೀಣ್‌ಚಂದ್ರ ಶೆಟ್ಟಿ
ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್
ಶ್ರೀ ಮಧುಕರ್ ಎಂ. ಶೆಟ್ಟಿ
ಶ್ರೀ ಸಂತೋಷ್ ಶೆಟ್ಟಿ
ಶ್ರೀ ಕಿರಣ್ ಕುಮಾರ್ ಶೆಟ್ಟಿ, ಪೆಪ್ಸಿ
ಶ್ರೀ ಕೆ. ನಿರಂಜನ್ ಶೆಟ್ಟಿ
ಶ್ರೀ ಶರತ್ ಶೆಟ್ಟಿ, ಬ್ರಾಹ್ಮಿ ಕೇಟರರ್ಸ್

ಹೊಸ ವರ್ಷದ ಸಂಭ್ರಮಾಚರಣೆಯಲ್ಲಿ ಮಕ್ಕಳು ಸೇರಿದಂತೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಹೊಸ ವರ್ಷ ಸಂಭ್ರಮಾಚರಣೆಯು ಅತಿ ಯಶಸ್ವಿಯಾಗಿ ಹೊರ ಬರಲು ಹಗಲಿರುಳು ಶ್ರಮಿಸಿದ ಯುವ ವಿಭಾಗದ ಎಲ್ಲಾ ಸದಸ್ಯರುಗಳಿಗೆ, ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇವೆ.




ಹೊಸ ವರ್ಷದ ಆಚರಣೆಯ ಪ್ರಚಾರವನ್ನು ಮಾಡಲು ಸಹಕರಿಸಿ ಅತೀ ಪರಿಣಾಮಕಾರಿಯಾಗಿ ಸಂಘದ ಸದಸ್ಯರಿಗೆ ತಲುಪಲು ಸಾಧ್ಯವಾಗುವಂತೆ ಮಾಡಿದ ನಮ್ಮ ಸಮಾಜ ಹಾಗೂ ಸಮುದಾಯದ ಮತ್ತು ಉಡುಪಿ ಮಂಗಳೂರು ಮೂಲದ ಅನೇಕ ಚಲನಚಿತ್ರ ನಟರು, ನಟಿಯರು, ನಿರ್ದೇಶಕರು, ಕಿರುತೆರೆ ನಟನಟಿಯರು, ಸಂಗೀತ ನಿರ್ದೇಶಕರು, ಹಾಗೂ ಇನ್ನಿತರ ಕ್ಷೇತ್ರದ ಖ್ಯಾತನಾಮರಿಗೆ ಬಂಟರ ಸಂಘ ಬೆಂಗಳೂರು ಯುವ ವಿಭಾಗವು ಸದಾ ಆಭಾರಿಯಾಗಿದೆ. ಕಾರ್ಯಕ್ರಮದ ನಿರೂಪಣೆಯನ್ನು ಯುವ ವಿಭಾಗದ ಸದಸ್ಯರಾದ ಶ್ರೀ ಸಂತೋಷ್ ಶೆಟ್ಟಿ ಹಾಗೂ ನ್ಯೂಸ್ ಆ್ಯಂಕರ್ ಶಮೀರಾ ಬೆಳುವಾಯಿಯವರು ನೆರವೇರಿಸಿದರು.

**ಮಧುಸೂಧನ್ ಶೆಟ್ಟಿ**
ಸಂಚಾಲಕರು, ಯುವ ವಿಭಾಗ

**ಸಿಎ. ಕಿಶೋರ್ ಶೆಟ್ಟಿ**
ಚೇರ್‌ಪರ್ಸನ್, ಯುವ ವಿಭಾಗ



## ಅಭಿನಂದನೆಗಳು

ಮಹಾರಾಷ್ಟ್ರದ ರಾಜಧಾನಿ ಮುಂಬೈನಲ್ಲಿ ನಡೆದ 3ನೇ ರಾಷ್ಟ್ರೀಯ ಯೋಗಾಸನ ಕ್ರೀಡಾ ಚಾಂಪಿಯನ್ ಶಿಪ್‌ನ ಸಬ್ ಜೂನಿಯರ್ ಸ್ಪರ್ಧೆಯಲ್ಲಿ ಬೆಂಗಳೂರಿನ ರಾಜರಾಜೇಶ್ವರಿ ನಗರದ ಶ್ರೀ ರಾಜರಾಜೇಶ್ವರಿ ವಿದ್ಯಾ ಶಾಲೆಯ ಹಳೆ ವಿದ್ಯಾರ್ಥಿನಿ **ಅಕ್ಷತಾ ಜೆ. ಶೆಟ್ಟಿ** ಯವರು ಚಿನ್ನದ ಪದಕ ಪಡೆದು ಕರ್ನಾಟಕಕ್ಕೆ ಕೀರ್ತಿ ತಂದಿದ್ದಾರೆ. ಇವರು ಶ್ರೀ ಜೈರಾಮ್ ಮತ್ತು ಶ್ರೀಮತಿ ವನಿತಾ ಶೆಟ್ಟಿಯವರ ಪುತ್ರಿ. ಇವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

# ಕಟೀಲುಶ್ರೀ ದುರ್ಗಾಪರಮೇಶ್ವರಿ ಜ್ಯೋತಿಷ್ಯ ಪೀಠ

**ಪ್ರಧಾನ ತಾಂತ್ರಿಕ ಶ್ರೀ ಶ್ರೀ ವಿಜಯೇಂದ್ರ ಭಟ್**

ದೈವ ಪ್ರಶ್ನೆ ಅಷ್ಟಮಂಗಳ ಪ್ರಶ್ನೆ ಜಾತಕ ಹಸ್ತ ಫೋಟೋ ನೋಡಿ
ಸಂಪೂರ್ಣ ಭವಿಷ್ಯವನ್ನು ತಿಳಿಸುತ್ತಾರೆ

**ನಿಮ್ಮ ಸಮಸ್ಯೆ ಏನೇ ಇರಲಿ ಕೇರಳಿಯ ಯಂತ್ರ ಮಂತ್ರ ತಾಂತ್ರಿಕ ವಿಧಿ ವಿಧಾನಗಳಿಂದ ಶ್ರೀ ಕಟೀಲು ದುರ್ಗಾಪರಮೇಶ್ವರಿ ಅನುಗ್ರಹದಿಂದ. 5 ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ**



**ಶ್ರೀ ಕಟೀಲು ದುರ್ಗಾಪರಮೇಶ್ವರಿ ದೇವಿ ಆರಾಧಕರು**

ದೂರದ ಊರಿನವರಿಗೆ ಫೋನ್
ಮೂಲಕ ಪರಿಹಾರ ತಿಳಿಸುತ್ತಾರೆ

**99452 22228**

**ಮನೆಯಲ್ಲಿ ಅಶಾಂತಿ ಮಾನಸಿಕ ಕಿರಿಕಿರಿ ವಿದ್ಯಾಭ್ಯಾಸದಲ್ಲಿ ತೊಂದರೆ ಮದುವೆ ಯೋಗ ಬೇಗನೆ ಕೂಡಿಬರಲು ಸ್ತ್ರೀ ಪುರುಷ ಪ್ರೇಮ ಆಕರ್ಷಣ ಸಿದ್ದಿ ದೂರವಾಗಿರುವ ಪತಿ ಪತ್ನಿ ಒಂದಾಗಲು ಡೈವರ್ಸ್ ಸಮಸ್ಯೆ ಸಂತಾನ ಲೈಂಗಿಕ ದೋಷ ಹಣಕಾಸಿನ ಸಮಸ್ಯೆಯಿಂದ ಮುಕ್ತಿ ಪಡೆಯಲು ಶತ್ರುಗಳು ಮೆತ್ತಗಾಗಿ ಮೂಲೆ ಸೇರಲು ಉದ್ಯೋಗ ವ್ಯಾಪಾರದಲ್ಲಿ ಪ್ರಗತಿ ಹೊಂದಲು ಮಾಟ ಮಂತ್ರ ವಶೀಕರಣ ನಿವಾರಣೆ ಅತ್ತೆ ಸೊಸೆ ಕಲಹ ಅದೃಷ್ಟ ಪ್ರಾಪ್ತಿ ಸಮಸ್ಯೆ ಯಾವುದೇ ಇರಲಿ ಪರಿಹಾರ ಶತಸಿದ್ಧ**

ಸ್ಥಳ :-ಕೆ ಎಸ್ ರಾವ್ ರೋಡ್, ಮಂಗಳೂರು ಹಾಗು
ಡಿವಿಜಿ ರೋಡ್ ಬೆಂಗಳೂರು

ADVT.

# ಶ್ರದ್ಧಾಂಜಲಿ



ಡಾ. ಬಿ. ಜಯರಾಮ್ ರೈ
ಸದಸ್ಯತ್ವ ಸಂಖ್ಯೆ: CL000268

ಬೆಳ್ಳಾರೆ ಪನ್ನೆಗುತ್ತು ಡಾ. ಬಿ. ಜಯರಾಮ್ ರೈಯವರು ದಿನಾಂಕ 09.12.2022ರಂದು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಸವಣೂರು ಶ್ರೀಮತಿ ವಿಜಯಲಕ್ಷ್ಮೀ ಜೆ. ರೈ, ಇಬ್ಬರು ಪುತ್ರರು, ಓರ್ವ ಸಹೋದರಿ, ಓರ್ವ ಮೊಮ್ಮಗ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀಮತಿ ಸವಿತಾ ವಿ. ಶೆಟ್ಟಿ
ಸದಸ್ಯತ್ವ ಸಂಖ್ಯೆ: CL009229

ಐರೋಡಿ ಶ್ರೀಮತಿ ಸವಿತಾ ವಿ. ಶೆಟ್ಟಿಯವರು ದಿನಾಂಕ 10.12.2022ರಂದು ತಮ್ಮ 38ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತಿ ಗಿಳಿಯಾರು ಬಡಾಮನೆ ಶ್ರೀ ವಸಂತ್ ಶೆಟ್ಟಿ ಜಿ., ಇಬ್ಬರು ಪುತ್ರಿಯರು, ಓರ್ವ ಸಹೋದರ, ಓರ್ವ ಸಹೋದರಿ ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ವಿ. ರಾಮ್‌ಮೋಹನ್ ಶೆಟ್ಟಿ
ಸದಸ್ಯತ್ವ ಸಂಖ್ಯೆ: CL009161

ವಿಜಯಾ ಬ್ಯಾಂಕ್‌ನ ನಿವೃತ್ತ ಅಧಿಕಾರಿ ಶಿರ್ವ ಶ್ರೀ ವಿ. ರಾಮ್‌ಮೋಹನ್ ಶೆಟ್ಟಿಯವರು ದಿನಾಂಕ 16.12.2022ರಂದು ತಮ್ಮ 69ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕಾಸರಗೋಡು ಶ್ರೀಮತಿ ವಂದನಾ ಆರ್. ಶೆಟ್ಟಿ, ಇಬ್ಬರು ಪುತ್ರಿಯರು, ಓರ್ವ ಪುತ್ರ, ಇಬ್ಬರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.




ಶ್ರೀ ಹರಿಪ್ರಸಾದ್ ಶೆಟ್ಟಿ ಎಸ್.
ಸದಸ್ಯತ್ವ ಸಂಖ್ಯೆ: CL001376

ಬೆಂಗಳೂರು ಬಂಟರ ಸಂಘದ ಮಾಜಿ ಕಾರ್ಯಕಾರಿ ಸಮಿತಿ ಸದಸ್ಯ, ಬೆಂಗಳೂರು ಬಂಟ್ಸ್ ಹೋಟೆಲ್ ಮಾಲೀಕರ ಸಂಘದ ಸಂಸ್ಥಾಪಕ ಅಧ್ಯಕ್ಷರು ಹಾಗೂ ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ ಬೆಂಗಳೂರು ಇದರ ಹಾಲಿ ನಿರ್ದೇಶಕರಾದ ಕಟಪಾಡಿ ಹಾಡಿಮನೆ ಶ್ರೀ. ಎಸ್. ಹರಿಪ್ರಸಾದ್ ಶೆಟ್ಟಿಯವರು ದಿನಾಂಕ 24.12.2022ರಂದು ತಮ್ಮ 75ನೇ ವಯಸ್ಸಿನಲ್ಲಿ ನಿಧನರಾದರು. ಹೋಟೆಲ್ ಸತ್ಕಾರ್ ಇದರ ಮಾಲೀಕರಾದ ಇವರು ತಮ್ಮ ಪತ್ನಿ ನಿಟ್ಟೆಗುತ್ತು ಶ್ರೀಮತಿ ಸಂಧ್ಯಾ ಹೆಚ್. ಶೆಟ್ಟಿ, ಇಬ್ಬರು ಪುತ್ರರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ಟಿ.ಎಸ್. ಚಂದ್ರಶೇಖರ್ ಹೆಗ್ಡೆ
ಸದಸ್ಯತ್ವ ಸಂಖ್ಯೆ: CL006601

ತೂದೂರು ಶ್ರೀ ಟಿ. ಎಸ್. ಚಂದ್ರಶೇಖರ್ ಹೆಗ್ಡೆಯವರು ದಿನಾಂಕ 26.12.2022ರಂದು ತಮ್ಮ 66ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ತೀರ್ಥಹಳ್ಳಿ ಶ್ರೀಮತಿ ವೇದಾವತಿ, ಇಬ್ಬರು ಪುತ್ರರು, ನಾಲ್ವರು ಸಹೋದರರು, ಇಬ್ಬರು ಸಹೋದರಿಯರು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



ಶ್ರೀ ಜಗನ್ನಾಥ್ ಬಿ. ಶೆಟ್ಟಿ
ಸದಸ್ಯತ್ವ ಸಂಖ್ಯೆ: CL000082

ಹೋಟೆಲ್ ಉದ್ಯಮಿ ಕಾಪು ಪಡು ದೊಡ್ಡಮನೆ ಶ್ರೀ ಜಗನ್ನಾಥ್ ಬಿ. ಶೆಟ್ಟಿಯವರು ದಿನಾಂಕ 31.12.2022ರಂದು ತಮ್ಮ 101ನೇ ವಯಸ್ಸಿನಲ್ಲಿ ನಿಧನರಾದರು. ಇವರು ತಮ್ಮ ಪತ್ನಿ ಕುತ್ಯಾಡಿ ಮೂಡುಬೆಟ್ಟು ಪಡುಮನೆ ಶ್ರೀಮತಿ ಸರೋಜಿನಿ ಜೆ. ಶೆಟ್ಟಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, 9 ಜನ ಮೊಮ್ಮಕ್ಕಳು, 7 ಮರಿ ಮಕ್ಕಳು ಹಾಗೂ ಬಂಧು-ಬಳಗವನ್ನು ಅಗಲಿರುತ್ತಾರೆ. ಸಂಘದ ಸರ್ವ ಸದಸ್ಯರು ಇವರ ಆತ್ಮಕ್ಕೆ ಚಿರಶಾಂತಿ ಕೋರಿ ಸಂತಾಪ ಸೂಚಿಸಿರುತ್ತಾರೆ.



SHANGHAI COURT
Chinese & Thai Restaurant
2023
HAPPY New Year
We're ringing in the new year with a delicious offer
20% off!
Place your order on our website & get
Limited time offer Only for bunts family
OFFER VALID TILL FEBRUARY 15TH @ ALL BRANCHES
T&C: This voucher is valid only for Dine-in & Take away
www.shanghaicourt.in
Home Delivery & Reservations
VB Layout 70225 03188
Akshay Nagar 7337 96111
Gunjur 96063 13388
Seegehalli 96063 51888
RR Nagar 97311 75999
RBI LAYOUT - JP NAGAR 99804 97409

ADVT.


SURAKSHAA
CAR CARE PVT.LTD.
MARUTI SUZUKI ARENA
With Best Compliments From
SURAKSHAA CAR CARE PVT. LTD.
Sales & Service
MARUTI SUZUKI ARENA
MARUTI SUZUKI
NEXA
# 201/2, Beratena Agrahara Hosur Main Road,
Electronic City, Bengaluru - 560100 | Mob: 88844 42229
For Sales & Service Call: E- City - 08046837061 | Koramangala & Banashankari: 08068970953
ELECTRONIC CITY: No. 30/3 Hosur Main Road Electronic City, Bangalore - 560100. | KORAMANGALA: No. 9, 4th B Block, 100 Feet Road, Next to BDA Complex, Bangalore - 560034. | BOMMANAHALLI: No. 54/1, Hosur Main Road, Bommanahalli, Bangalore - 560068. | HAROHALLI: Sy. No. 44 / 4b, Hosakote Village, Harohalli Hobli, Kanakapura, Main Road, Ramanagara District - 562 112. | BANASHANKARI BSK 3rd Stage, Bangalore - 560085. | BANGARPET: No.180/4, Opp. APMC Yard, Kolar Main Road, Bangarpet - 563114. | ATTIBELE: Survey No.-22/7/8, Sarjapur Main RoadIndlabele Village, Opp. to Golden Liberty, Attibele P.O., Bangalore - 562107. SRINIVASPURA : Kolar Srinivaspura Main Road, Opp Venkatadri High School, Srinivaspura - 563135 | Up Coming Outlets: Banashankari 6th Stage & Chikkatirupati
www.marutisurakshaa.com

ADVT.

# ಭಾವಪೂರ್ಣ ಶ್ರದ್ಧಾಂಜಲಿ



**ದಿ॥ ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ**

**ಜನನ – 03.03.1947 ಮರಣ - 24.12.2022**

ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತದ ಸಂಸ್ಥಾಪಕ ನಿರ್ದೇಶಕರು ಹಾಗೂ ಹಾಲಿ ನಿರ್ದೇಶಕರಾಗಿ ಒಟ್ಟು ನಾಲ್ಕು ಅವಧಿಗೆ ಸೇವೆ ಸಲ್ಲಿಸಿರುವ ಶ್ರೀ. ಹರಿಪ್ರಸಾದ್ ಎಸ್. ಶೆಟ್ಟಿಯವರ ಅಗಲಿದ ಆತ್ಮಕ್ಕೆ ಭಗವಂತನು ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ.

**ಶ್ರೀ ಐ. ಜಯಪ್ರಸಾದ್ ಶೆಟ್ಟಿ**
**ಅಧ್ಯಕ್ಷರು**

**ಶ್ರೀ ಹೆಚ್. ಶ್ರೀಧರ್ ಹೆಗ್ಡೆ**
**ಉಪಾಧ್ಯಕ್ಷರು**

**ನಿರ್ದೇಶಕರು :**

ಶ್ರೀ ಕೆ. ಭಗವಾನ್‌ದಾಸ್ ರೈ
ಶ್ರೀ ಡಿ. ಚಂದ್ರಹಾಸ್ ರೈ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಸರ್ವಾಣಿ ಜಿ. ರೈ

ಹಾಗೂ ಸಿಬ್ಬಂದಿ ವರ್ಗ

**ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ**

ನಂ 5, ಎಸ್.ಜೆ. ಎಲಿಗೆನ್ಸ್, ಆದಾಯ ತೆರಿಗೆ ಬಡಾವಣೆ, ಚಂದ್ರ ಬಡಾವಣೆ ಮುಖ್ಯ ರಸ್ತೆ, ವಿಜಯನಗರ, ಬೆಂಗಳೂರು – 560 040.

ADVT.




**From 5th March to 9th March 2023**

HIGHLIGHTS : Varanasi - Kashi Vishwanath Temple,Holy Ganga Ghats Banaras, Hindu University Sarnath,Kala Bhairav Temple Prayagraj - Triveni Sangam,Sita Madi, Ayodhaya - Ram Janmabhoomi, Dashrath Mahal , Hanuman Gharhi.

**PACKAGE COST INR 36500/- PER PERSON - ALL INCLUSIVE - EX-MUMBAI**

**Cost Includes :** To & Fro Airfare from Mumbai (BOM-VNS/ LKO-BOM). Accommodation: 2Nt Varanasi, 1Nt Prayagraj, 1Nt Ayodhya with all meals. All transfers & sightseeing by AC Coach. Group accompanied by experienced Tour Manager. Cost excludes: All expenses of personal nature.

For any further details please contact:

IATA Approved

Canara Tours & Travels Pvt. Ltd
....... GOOD PEOPLE TO TRAVEL WITH

**Mr. S. B. Shetty – 9820510043**
101, Udyog Kshetra, L.B.S. Marg, Off Link Road, Mulund (W), Mumbai-80. | Tel.: 41115000 | Fax : 41115005

**Mr. T. T. Mada – 9820632934**
2, Srishti Complex, Opp. L & T Gate No.7, Saki Vihar Rd., Powai, Mumbai-72. **Tel. : (022) 42215000**
**Fax : 91-22-28571468 E-mail : info@canaratravels.com | Website : www.canaratravels.com**

**Mr. Prabhat Shetty - 9481950340**
204, Kirthi Sagar, Vidyaratnanagar Manipal - 576104

**Mr. Varun Mallya - 9480744833**
G/3, Inland Ornate Opp. Ocean Pearl, Navabharath Circle, Kodialbail, Mangalore-575003 Tel.: 0824-4258505/06

**Mr. Suresh Ajila 09448089189** (Bangalore)

ADVT.

ಸ್ಥಾಪನೆ : 1997

# ವಿಜಯ ಪತ್ತಿನ ಸೌಹಾರ್ದ ಸಹಕಾರಿ ನಿಯಮಿತ

## Vijaya Pathina Souharda Sahakari Niyamitha

ನಂ. 5, ಎಸ್.ಜೆ. ಎಲಿಗೆನ್ಸ್, 4ನೇ ಮಹಡಿ, ಚಂದ್ರಲೇಔಟ್ ಮುಖ್ಯರಸ್ತೆ, ಇನ್‌ಕಮ್ ಟ್ಯಾಕ್ಸ್ ಲೇಔಟ್
ವಿಜಯನಗರ, ಬೆಂಗಳೂರು–560 040. ದೂರವಾಣಿ: 23393444 ಮೊಬೈಲ್ : 8722006082
E-mail: vijaya_souharda@yahoo.in, vijayasouharda@rediffmail.com

**ವಿಜಯ ಪತ್ತಿನ ಸೌಹಾರ್ದ ಸಹಕಾರಿ – ಪ್ರಗತಿ ಪಥದತ್ತ**

ಸಹಕಾರಿಯು ಸುಸ್ಥಿರ ಬೆಳವಣಿಗೆಯತ್ತ ಸಾಗುತ್ತಿದೆ. 25ರ ರಜತ ಸಂಭ್ರಮಕ್ಕೆ ಕಾಲಿಡುತ್ತಿದೆ. ನಿಶ್ಚಿತ ಠೇವಣಿಗಳಿಗೆ ಆಕರ್ಷಕ ಬಡ್ಡಿದರವನ್ನು ನೀಡಲಾಗುವುದು. ಷೇರುಗಳನ್ನು ಖರೀದಿಸಿ ಸಹಕಾರಿಯ ಸದಸ್ಯರಾಗುವ ಮೂಲಕ ವಿವಿಧ ಠೇವಣಿ, ಸಾಲ ಸೌಲಭ್ಯವನ್ನು ಪಡೆದುಕೊಳ್ಳಬಹುದು. ಪಿಗ್ಮಿ ಸಂಗ್ರಹಣಾ ವ್ಯವಸ್ಥೆ ಕಲ್ಪಿಸಲಾಗಿದೆ. ಇವುಗಳ ಸದುಪಯೋಗವನ್ನು ಎಲ್ಲರೂ ಪಡೆದುಕೊಳ್ಳುವಂತೆ ಕೋರಲಾಗಿದೆ.

**ಸಾಲಗಳು**

- ಜಾಮೀನು ಸಾಲ : ರೂ. 50,000/–
- ವಾಹನ ಸಾಲ : 1 ಲಕ್ಷದಿಂದ 10 ಲಕ್ಷ – 24 ತಿಂಗಳಿಂದ 36 ತಿಂಗಳವರೆಗೆ
- ವ್ಯಾಪಾರ ಸಾಲ : 1 ಲಕ್ಷದಿಂದ 20 ಲಕ್ಷ
- ಗೃಹ ನಿರ್ಮಾಣ ಸಾಲ : 1 ಲಕ್ಷದಿಂದ 20 ಲಕ್ಷ – 120 ತಿಂಗಳು

**ಸಾಲದ ಬಡ್ಡಿ ದರ : 1 ಲಕ್ಷದವರೆಗೆ 14%, 1 ಲಕ್ಷ ಮೇಲ್ಪಟ್ಟು – 13%**

**2016–17 ರಿಂದ ಕ್ರಮವಾಗಿ 15% ವಾರ್ಷಿಕ ಡಿವಿಡೆಂಡ್ ವಿತರಣೆ**

**ಪ್ರಗತಿಗೆ ಕೈ ಜೋಡಿಸಿ ಸಹಕಾರಿ ಕ್ಷೇತ್ರದಲ್ಲಿ ಅದ್ಭುತ ಸಾಧನೆಗೆ ಸಹಕರಿಸಿ**

**ವ್ಯವಹಾರದ ವೇಳೆ**

| | ಬೆಳಿಗ್ಗೆ | ಸಾಯಂಕಾಲ | ವಾರದ ರಜಾದಿನ |
|---|---|---|---|
| ಮಂಗಳವಾರದಿಂದ ಶನಿವಾರದವರೆಗೆ | 9.30 ರಿಂದ 1.00 | 2.00 ರಿಂದ 6.00 | ಸೋಮವಾರ |
| ಭಾನುವಾರ | 9.30 ರಿಂದ 1.00 | ರಜಾ | |

**ನಿರ್ದೇಶಕರುಗಳು :**

ಶ್ರೀ ಕೆ. ಭಗವಾನ್ ದಾಸ್ ರೈ
ಶ್ರೀ ಹರಿಪ್ರಸಾದ್ ಎಸ್. ಶೆಟ್ಟಿ
ಶ್ರೀ ಬಿ. ಸಂತೋಷ್‌ಕುಮಾರ್ ಶೆಟ್ಟಿ
ಶ್ರೀ ಚಂದ್ರಹಾಸ್ ರೈ. ಡಿ
ಶ್ರೀ ಕೆ. ಪ್ರಮೋದ್‌ಚಂದ್ರ ಭಂಡಾರಿ
ಶ್ರೀಮತಿ ಮಂಜುಳಾ ಎಸ್. ಶೆಟ್ಟಿ
ಶ್ರೀಮತಿ ಸರ್ವಾಣಿ ಜಿ. ರೈ

ಸ್ಥಾಪಕ ಅಧ್ಯಕ್ಷರು : ದಿ|| ಡಾ|| ಐ.ವಿ. ಶೆಟ್ಟಿ – 1997
ಶ್ರೀ ಕೆ.ಆರ್. ಶೇಷಾದ್ರಿ – ಕಾರ್ಯದರ್ಶಿ

ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ
ಅಧ್ಯಕ್ಷರು

ಶ್ರೀ ಹೆಚ್. ಶ್ರೀಧರ್ ಹೆಗ್ಡೆ
ಉಪಾಧ್ಯಕ್ಷರು

ADVT.

# HAPPY PROSPEROUS NEW YEAR - 2023

**STEPPING INTO 31st YEAR ESTD. ON 12.12.1993**



**With Best Compliments From,**

**PARK-VIEW BAR / RESTAURANT & PARK VIEW CATEERS**
**UNIT OF SIRI MAHALINHESHWARA HOTELS (P) LTD.**

NO. 906 / A, 6th Main, Vijayanagar, Bangalore - 560 040.

**CALL US**

080 - 2335 8772
080 - 2320 9082

**HOUSE OF PALATES (P) LTD.,**
ESTD ON 2021
CLOUD KITCHEN, KAMAKSHIPALYA
ajayrai@houseofpalates.com

REGISTERED KA/BGW-1589/2021-2023 RNI NO : KARBIL/2005/16402, Date of Publication 07-01-2023.
Licenced post without prepayment License No. PMG BG /WPP-219/2021-2023, Total No. of Pages 28+4=32
Licensed to post at Bengaluru PSO, Mysore Road, Bengaluru - 560026, on 10th or 12th of every Month

# UNIVERSAL
## GROUP OF INSTITUTIONS

*A Ray of Hope for Success*



**23 Years of EXPERIENCE** / **Produced 7810+ OFFICERS**

LET YOUR DREAM OF
**CRACKING COMPETITIVE EXAMS**
BEGIN WITH US!

## ADMISSIONS OPEN 2022-23

| | |
|---|---|
| 11th & 12th PUC ARTS, COMMERCE & SCIENCE | **3+1 YEARS BA** with integrated Coaching for ▸ IAS ▸ IPS |
| **3+1 YEARS B.Com** with integrated Coaching for ▸ IAS ▸ IPS | **5 YEARS BA.LLB** with integrated Coaching ▸ IAS ▸ IPS ▸ AIJS Judiciary Exams |
| **3+1 YEARS BBA** | **3+1 YEARS BCA** |

## UNIVERSAL COACHING CENTRE


| | |
|---|---|
| **IAS** Coaching — New batch starting soon | **KAS** Coaching — New batch starting soon |

## UNIVERSITY TOPPERS


1st Rank
Sushma Doddbill


2nd Rank
Vishnushiva C


3rd Rank
Mehakanaz M C


4th Rank
Annez Fatima


6th Rank
M V Swastika


7th Rank
Dharmashree


8th Rank
Maregowda


10th Rank
Kaveri


10th Rank
Abhilash G R


**Shri. R. Upendra Shetty**
Founder Chairman

Contact our Vijayanagar Branch for **College & Coaching classes**
Address: **2922/20, next to Canara Bank, Near Attiguppe bus stop, RPC Layout, Vijayanagar, Bengaluru - 40**

**9686664985 | 9686664983 | 6366142774**

**info@universalinstitutions.com** **www.universalinstitutions.com**

SCAN HERE

College Address: Gururayanapura, Kolur Village, Tavarekere Hobli, Ramohalli Post, Bengaluru South Taluk, Bengaluru-74

ADVT.

Printed and Published by : Sri Anandram Shetty B. on behalf of Bunts' Sangha Bangalore.
# 324, Bunts' Sangha Complex, Chord Road, Vijayanagar, Bengaluru - 560040. Editor : Aravind Shetty M.
Printed at Poornima Printers, # 3 & 4, Sy. No. 51 / 14, Chowdeshwarinagar, Pipe Line Road, Laggere,
Bengaluru - 560 058. Phone : 080 - 23359588 | 23351210.